ಶ್ರೀ ಜಿ. ಶಿವಪ್ಪ.—ಒಂದು ಸಂದರ್ಭದಲ್ಲಿ ಪ್ರೆಸ್ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಈ ರೀತಿ ಸ್ಟೇಟ್‌ಮೆಂಟ್ ಕೊಡಬಹುದೇ ಎಂದು ಕೇಳಿದ್ದಕ್ಕೆ ಅವರು ಹೇಳಿದರು: ನಿಜವಾಗಿಯೂ ಸರ್ಕಾರದವರು ಆ ಸಂದರ್ಭದಲ್ಲಿ ಜನಗಳಿಗೆ ಸಹಾಯಮಾಡದಿದ್ದಲ್ಲಿ ಬಹಳ ಕೆಟ್ಟಪರಿಣಾಮವಾಗುತ್ತಿತ್ತು ಎಂದು. ಸರ್ಕಾರದವರು ಆಹಾರದ ಡಿಪೋಗಳನ್ನು, ಗಂಜಿ ಕೇಂದ್ರಗಳನ್ನು, ತೆರೆದು ಹುಲ್ಲು ಎಂದರೆ ಹುಲ್ಲು, ರಾಗಿ ಎಂದರೆ ರಾಗಿ, ಜೋಳ ಎಂದರೆ ಜೋಳ ಈ ರೀತಿ ಏನು ಕೇಳಿದರೆ ಅದು ಒದಗಿಸಿದರು. ನಮ್ಮ ತಾಲ್ಲೂಕಿನಲ್ಲಿ ಹೇಳಬೇಕೆಂದರೆ ಚಿತ್ರದುರ್ಗ ಹೊಳಲ್ಕೆರೆ ತಾಲ್ಲೂಕುಗಳಲ್ಲಿ 300 ರಿಲೀಫ್ ಕಾಂಗಾರಿಗಳನ್ನು ಮಾಡಿದ್ದಾರೆ. ಆ ಸಂದರ್ಭದಲ್ಲಿ ಹಣ ದುರುಪಯೋಗವಾಗಿರಬಹುದು. ಕೆಲವು ಲೋಪದೋಷಗಳನ್ನು ಮಾಡಿರಬಹುದು. ಆದರೆ ಅಧಿಕಾರಿಗಳನ್ನು ಆರೋಪಣೆ ಮಾಡುವುದಕ್ಕೆ ಮುಂಚೆ ನಮ್ಮ ಸಾರ್ವಜನಿಕರ ಮತ್ತು ಪ್ರಜೆಗಳ ನೀತಿಯುಮಟ್ಟ ಎಷ್ಟುಮಟ್ಟಿಗೆ ಇದೆ ಎಂಬುದನ್ನು ಯೋಚನೆಮಾಡಬೇಕಾಗಿದೆ. ಏಕೆಂದರೆ ಅವತ್ತಿನ ದಿವಸ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿಗೆ ಇರತಕ್ಕ ಕೆಲಸವನ್ನು ರೆವೆನ್ಯೂ ಡಿಪಾರ್ಟ್‌ಮೆಂಟಿನವರು ಮಾಡಿದರು. ರೆವೆನ್ಯೂ ಇನ್ಸ್‌ಪೆಕ್ಟರುಗಳು, ಸೂಪರ್‌ವೈಜರುಗಳು, ಸಬ್‌ಓವರ್‌ಸೀಯರುಗಳು ತಮ್ಮ ಅನುಭವದ ಮೇಲೆ ಆ ಕೆಲಸಗಳನ್ನೆಲ್ಲಾ ನಿರ್ವಹಿಸಿದರು ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು ಎಂದು ಭಾವಿಸುತ್ತೇನೆ. ರಿಲೀಫ್ ಕೆಲಸಮಾಡತಕ್ಕ ಸಂದರ್ಭದಲ್ಲಿ ಎರಡು ವಿಷಯಗಳಿಗೆ ನನ್ನ ವಂದನೆಗಳನ್ನು ಸಲ್ಲಿಸಬೇಕಾಗಿದೆ. ಒಂದನೆಯದು ರೆಡ್‌ಕ್ರಾಸ್ ಸೊಸೈಟಿಯವರು ರಷ್ಯನ್ ಗೋಧಿಯನ್ನು ನಮಗೆ ಕೊಟ್ಟು ಸಹಾಯಮಾಡಿದ್ದಕ್ಕಾಗಿ ನಮ್ಮ ವಂದನೆಗಳನ್ನು ಅವರಿಗೆ ಅರ್ಪಿಸುತ್ತೇನೆ. ಈಗ ಸರ್ಕಾರದವರಲ್ಲಿ ಪ್ರಾರ್ಥನೆ ಏನೆಂದರೆ ಇವತ್ತು ಈ ರಿಲೀಫ್ ಕಾಂಗಾರಿಗಳನ್ನು ಅಷ್ಟಕ್ಕೆ ಬಿಟ್ಟರೆ ಸಾಲದು. ಅವನ್ನು ಕನ್‌ಸಾಲಿಡೇಟ್‌ಮಾಡಬೇಕು. ಮಾಡದೇಇದ್ದರೆ ಯಾವ ಪ್ರಯೋಜನವೂ ಆಗುವುದಿಲ್ಲ. ಅನೇಕ ರಸ್ತೆಗಳನ್ನು ಮಾಡಿದ್ದಾರೆ. ಅದಕ್ಕೆ ಕಾಲುವೆಗಳನ್ನು, ಸೇತುವೆಗಳನ್ನು ಕಟ್ಟಿಸದೇ ಕೈಬಿಟ್ಟಿದ್ದೇ ಆದರೆ ಪುನಃ ರಸ್ತೆ ಮಾಡುವುದಕ್ಕೆ ವಿಶೇಷವಾಗಿ ಖರ್ಚಾಗುತ್ತದೆ. ಇದನ್ನೆಲ್ಲಾ ಕನ್‌ಸಾಲಿಡೇಟ್ ಮಾಡಿ ಖಾಯಂ ಆಗಿರತಕ್ಕ ಕೆಲಸಕಾರ್ಯಗಳನ್ನು ಕೈಕೊಳ್ಳಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥನೆಮಾಡಿಕೊಳ್ಳುತ್ತೇನೆ.

ಶ್ರೀಮಾನ್ ಮಹಾರಾಜರವರು ಅವರ ಭಾಷಣದಲ್ಲಿ ಒಂದು ವಿಚಾರ ಪ್ರಸ್ತಾಪಮಾಡಿದ್ದಾರೆ. ಅದೇನೆಂದರೆ ಇರಿಗೇಷನ್ ಪ್ರಾಜೆಕ್ಟುಗಳ ಪ್ರಶ್ನೆ. ಇದು ಬಹಳ ಕಾಲದಿಂದ ಇತ್ತು. ಕಾಂಗ್ರೆಸ್ ಸರ್ಕಾರ ಬಂದಮೇಲೆ ಈ ಸಮಸ್ಯೆಗಳಿಗೆ—ನಮ್ಮ ಸಂಸ್ಥಾನದ ಅತಿಮುಖ್ಯವಾದಂಥಾ ನೀರಾವರಿ ಯೋಜನೆಗಳನ್ನು ಕೈಕೊಳ್ಳಲಿಕ್ಕೆ ಬಹಳವಾಗಿ ಪ್ರಯತ್ನಮಾಡಿದರು, ಆದರೂ ಕೂಡ ಹಣಕಾಸಿನ ಅಭಾವದಿಂದ ನಿರೀಕ್ಷೆಮಾಡಿದಷ್ಟು ಅವನ್ನು ಕೈಕೊಳ್ಳಲಿಕ್ಕೆ ಸಾಧ್ಯವಾಗಲಿಲ್ಲ......

[Sri S. SRINIVASA IYENGAR in the Chair]

ಈ ರೀತಿ ಹೆಚ್ಚಿನ ರೀತಿಯಲ್ಲಿ ಕೈಕೊಂಡಿರತಕ್ಕ ಯೋಚನೆಗಳನ್ನು ಪೂರೈಸಲಿಕ್ಕೆ ಬೇರೆಯವರಿಂದ ಹಣ ತೆಗೆದುಕೊಂಡು ಬಡ್ಡಿಕೊಡುವುದಕ್ಕಿಂತಲೂ ನಾವೇ ಹಣ ಸಾಲವನ್ನೆತ್ತಿಕೊಡುವುದು ಉತ್ತಮ ಎಂದು ಹೇಳಿ ಸಾಲ ಎತ್ತಿದ್ದಾರೆ. ಇದರಿಂದ ದೇಶದ ಉತ್ಪನ್ನ ಹೆಚ್ಚಿ ಆ ಹಣವನ್ನು ನಾವು ಪುನಃ ವಾಪಸುಕೊಡಲಿಕ್ಕೆ ಸಾಧ್ಯವಾಗುತ್ತದೆ ಎಂದು ಹೇಳಿ ನಾನು ಅದನ್ನು ಸ್ವಾಗತಿಸುತ್ತೇನೆ. ಈಗತಾನೆ ಸರ್ಕಾರದವರು ಒಬ್ಬ ಸ್ಪೆಷಲ್ ಚೀಫ್ ಇಂಜನಿಯರನ್ನು ನೇಮಕಮಾಡಿರುತ್ತಾರೆ. ಮತ್ತು ಅದಕ್ಕೆ ತಕ್ಕ ಅಧಿಕಾರವರ್ಗವನ್ನು ನೇಮಕಮಾಡಿ ಕೆಲಸಕಾರ್ಯಗಳನ್ನು ಮಾಡುತ್ತಿರುವುದನ್ನು ನೋಡಿದರೆ ಈ ನಮ್ಮ ಸರ್ಕಾರ ಕೇವಲ ಮಾತಿನಲ್ಲಿ ಅಲ್ಲ, ನುಡಿದಂತೆ ನಡೆ, ನಡೆದಂತೆ ನುಡಿ ಎಂಬುದನ್ನು ಅನುಷ್ಠಾನದಲ್ಲಿಟ್ಟುಕೊಂಡಿದ್ದಾರೆ ಎಂಬುದನ್ನು ಮನದಟ್ಟುಮಾಡಿಕೊಳ್ಳಬೇಕು.

ಆಮೇಲೆ ಜಿಲ್ಲಾವಾಳಿ ಅನೇಕ ಕೆರೆಗಳು ಒಡೆದುಹೋದವು. ಅದಕ್ಕೆ ಕಾರಣ ಡಿಫೆಕ್ಟೀವ್ ಕನ್‌ಸ್ಟ್ರಕ್ಷನ್ ಎಂದು ಕೆಲವರು ಸದಸ್ಯರು ಹೇಳಿದರು. ನನಗೆ ತಿಳಿಯುವುದು ಏನೆಂದರೆ ಹೋದಸಾರಿ ಎಂದೆಂದಿಗೂ ಕಾಣದಂಥ ವಿಚಿತ್ರವಾದಂಥಾ ಮಳೆ ನಮ್ಮ ದೇಶದಲ್ಲಿ ಉಂಟಾಯಿತು. ಅನೇಕ ಕೆರೆಗಳಲ್ಲಿ ಓವರ್‌ಫ್ಲೋ ಆಗಿ ನೀರು ಹರಿದು ಹೋಯಿತು. ಅಂಥಾ ಮಳೆಗೆ ಯಾವ ಕೆರೆಗಳೂ ತಡೆಯುವುದಿಲ್ಲ. ಕೆರೆಗಳು ಕೋಡಿ ಬಿದ್ದು ಮಣ್ಣು ಕುಸಿದು ಒಡೆದುಹೋಗುವುದು ಸ್ವಾಭಾವಿಕ. ಪುನಃ ಅವನ್ನು ರಿಪೇರಿಮಾಡುತ್ತಾರೆ. ಅದಕ್ಕೆ ಹೆಚ್ಚಿನ ತರದೂದು ಮಾಡತಕ್ಕದ್ದು ಅನಾವಶ್ಯಕ ಎಂದು ನನಗೆ ಅನಿಸುತ್ತದೆ.

ಇವೊತ್ತು ಅತಿಮುಖ್ಯವಾದ ಪ್ರಶ್ನೆ ಯಾವುದು ಎಂಬುದನು ಹೇಳುತ್ತೇನೆ. ಇಡೀ ಹಿಂದೂಸ್ಥಾನದಲ್ಲೇ ಮೊದಲು ಹೆದ್ದಾರಿಯನು ಹಾಕಿರತಕ್ಕದ್ದು ಮೈಸೂರು ಸರ್ಕಾರ. ಏನೋ ಒಂದು ಸಂದರ್ಭ ಉಂಟಾಗಿ ಅದೇನೋ ಹೇಳುತ್ತಾರಲ್ಲಾ ಯಾರೋ ಕೆಲಸ ಮಾಡಿದರು ಯಾರಿಗೋ ಹೆಸರು ಹೋಯಿತು ಎನ್ನುವಹಾಗೆ ಆಹಾರ ನಿಯಂತ್ರಣವನ್ನು ಸಡಿಲಿಸಲಿಕ್ಕೆ ಮೊದಲು ಪ್ರಯತ ಪಟ್ಟದ್ದು ಇಡೀ ಹಿಂದೂಸ್ಥಾನದಲ್ಲಿ ಮೈಸೂರು ಸರ್ಕಾರ. ಅದನ್ನು ಒಂದಲ್ಲ ಹತ್ತಾವರ್ತಿ ಹೇಳುತ್ತೇನೆ.—ಅಂತೂ ನಮ್ಮ ಮಗ್ಗುಲಲ್ಲೇ ಇದ್ದ ರಾಜಗೋಪಾಲಾಚಾರಿಯವರಿಗೆ ಅಕಸ್ಮಾತ್ತಾಗಿ ದೊಡ್ಡವರು ಎಂತಲೋ ಏನೋ ಆ ಹೆಸರು ಅವರಿಗೆ ಹೋಯಿತು. ಮೊದಲು ಆಹಾರ ನಿಯಂತ್ರಣದಿಂದ ರೈತಾಪಿಜನರಿಗೆ ಬೆಳೆಯತಕ್ಕವರಿಗೆ ಕೊಂಡುಕೊಳ್ಳತಕ್ಕವರಿಗೆ ವಿಪರೀತ ತೊಂದರೆಯಿತ್ತು. ಇವೊತ್ತು ಅಂಥ ನಿಯಂತ್ರಣ ಸಂಪೂರ್ಣವಾಗಿ ಹೋಗತಕ್ಕ ಕಾಲಬಂದಿದೆ. ಇದಕ್ಕೆ ಕಾರಣ ಸರ್ಕಾರದವರು ಕೈಕೊಂಡಿರತಕ್ಕ ಫುಡ್‌ಸ್ಕೀಂಗಳೇ ಆಗಿವೆ. ಸರ್ಕಾರದವರು ರೈತನ ಅಭಿವೃದ್ಧಿಗೆ ವಿಶೇಷವಾಗಿ ಸಾಲ ಮತ್ತು ಅವನಿಗೆ ಅನೇಕ ರೀತಿಯಲ್ಲಿ ಕ್ರೆಡಿಟ್ ಫೆಸಿಲಿಟೀಸ್‌ನ್ನು ಮಾಡಿಕೊಟ್ಟಿದ್ದರಿಂದ ಮತ್ತು ದೈವದತ್ತವಾದ—ನಾವು ಆಗಿಂದಾಗ್ಗೆ ಸಂಸ್ಕೃತಿ ಪ್ರಚಾರಮಾಡಿದ್ದರ ಫಲವಾಗಿ—ಮಳೆಬಂದದ್ದರಿಂದ ಸರ್ಕಾರದವರು ಆಹಾರ ನಿಯಂತ್ರಣವನು ತೆಗೆಯುವುದಕ್ಕೆ ಅವಕಾಶವಿದೆ. ಅವರು ಇಷರಲ್ಲೇ ಸಂಪೂರ್ಣವಾಗಿ ತೆಗೆಯುತ್ತಾರೆ, ತೆಗೆಯುವುದರಲ್ಲಿ ಯಾವ ಸಂಶಯವೂ ಇಲ್ಲ ಎಂದು ನಾನು ನಂಬಿರುತ್ತೇನೆ. ಈ ಸಂದರ್ಭದಲ್ಲಿ ಸರ್ಕಾರದವರಿಗೆ ನಾನು ಒಂದು ಸಲಹೆ ಮಾಡಬಯಸುತ್ತೇನೆ. ಮೊನೆ ಕೂಡ ಒಂದು ಪ್ರಶ್ನೆ ಕೇಳಲಾಗಿದೆ ರಾಗಿ ಮತ್ತು ಜೋಳದ ಧಾರಣೆ ಕಮ್ಮಿಯಾಗಿದೆ. ಬತ್ತ ಬೆಳೆಯತಕ್ಕವರಿಗೆ ಯಾವ ರೀತಿ ಅನುಕೂಲ ಕಲ್ಪಿಸಿದ್ದೀರೋ ಅದೇ ರೀತಿ ಅನುಕೂಲ ಕಲ್ಪಿಸಿಕೊಡಬೇಕೆಂದು ಸಲಹೆಮಾಡಿ ಪ್ರಾರ್ಥಿಸಿಕೊಳ್ಳುತ್ತೇನೆ. ಆಹಾರ ಶಾಖೆಯ ಮಂತ್ರಿಗಳು ಈಗ ಧಾರಣೆ ಜಾಸ್ತಿ ಇದೆ ಎಂದು ಹೇಳಿದರು. ನನ್ನ ಅಭಿಪ್ರಾಯದಲ್ಲಿ ಸುಗ್ಗಿ ಆದನಂತರ ಬೆಲೆ ಕಮ್ಮಿ ಆಗಬಹುದು. ಆ ಸಂದರ್ಭದಲ್ಲಿ ರೈತನ ಹಿತರಕ್ಷಣೆ ಮಾಡಲಿಕ್ಕೆ ಎಷ್ಟು ಮುಂಜಾಗ್ರತೆ ಕಾರ್ಯಕ್ರಮ ತೆಗೆದುಕೊಳ ಬೇಕೋ ಅಷ್ಟು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಸಲಹೆಮಾಡುತ್ತೇನೆ. ಮತ್ತೊಂದು ವಿಚಾರ, ಆಹಾರ ಇಲಾಖೆಯ ಖರ್ಚು ವೆಚ್ಚಗಳನ್ನು ಕಡಿಮೆಮಾಡಬೇಕೆಂದು ಸರ್ಕಾರದವರಲ್ಲಿ ಕೇಳಿಕೊಳ್ಳುತ್ತೇನೆ. ಏಕೆಂದರೆ ಹತೋಟಿ ತೆಗೆಯಬೇಕು ಎಂಬ ನಿರ್ಧಾರಕ್ಕೆ ಬಂದಿದ್ದೇವೆ. ಆದರೂ ಸಹ ಬಡ್ಜೆಟ್ ನೋಡಿದರೆ 30 ಲಕ್ಷ ರೂಪಾಯಿ ಖರ್ಚುಮಾಡುತ್ತಿದ್ದೀರಿ. ಈಗಲೂ ಅನೇಕ ಜನ ಆಹಾರ ಇಲಾಖೆಯ ಅಧಿಕಾರಿಗಳನ್ನು ಇಟ್ಟು ಕೊಂಡಿದ್ದೀರಿ. ಇದು ಅನಾವಶ್ಯಕ ಎಂದು ತಿಳಿದುಕೊಂಡಿದ್ದೇನೆ.

ಶ್ರೀ ಎಚ್ ಸಿದ್ಧವೀರಪ್ಪ.—1952-53ರಲ್ಲಿ ಆಹಾರದ ಇಲಾಖೆಗೆ ಜನರಲ್ ರೆವೆನ್ಯೂನಿಂದ ಏನೂ ಖರ್ಚು ಮಾಡಿಲ್ಲ. ಈ ವರ್ಷವೂ ಖರ್ಚುಮಾಡುವುದಿಲ್ಲ. ಆಹಾರದ ಇಲಾಖೆ ಇರುವುದರಿಂದ ಅದಕ್ಕಾಗಿ ನಮ್ಮ ಜನರಲ್ ರೆವೆನ್ಯೂನಿಂದ ಏನೂ ಖರ್ಚಾಗುವುದಿಲ್ಲ ಎಂಬುದನ್ನು ಈ ಸಮಯದಲ್ಲಿ ತಿಳಿಸುತ್ತೇನೆ.

ಶ್ರೀ ಜಿ. ಶಿವಪ್ಪ.—ಆ ಮೇಲೆ ಇನ್ನೊಂದು ಅತಿ ಮುಖ್ಯವಾದ ಪ್ರಶ್ನೆಯ ವಿಚಾರದಲ್ಲಿ ಎರಡು ಮಾತನ್ನು ಹೇಳಲು ಅಪೇಕ್ಷೆಪಡುತ್ತೇನೆ. ನಮ್ಮ ಮಿತ್ರರಾದ ಶ್ರೀ ಮುಲ್ಕ ಗೋವಿಂದರೆಡ್ಡಿಯವರು ಪಂಚವಾರ್ಷಿಕಯೋಜನೆ ವಿಚಾರದಲ್ಲಿ ಬಹಳ ಲಘುವಾಗಿ ಮಾತನಾಡಿದರು. ಇಂಥ ವಿಚಾರ ಹೇಳುವಾಗ ಅವರು ಕೇವಲ ಒಂದುಪಕ್ಷದ ವಿವಾದಕ್ಕೆ ಹೆಚ್ಚು ಗಮನ ಕೊಡದೆ ದೇಶಭಕ್ತಿಯಿಂದ ದೇಶ ಪ್ರೇಮದಿಂದ ಏನಾದರೂ ಮಾಡಿ ಈ ಯೋಜನೆ ಜಯಪ್ರದವಾಗುವಂತೆ ಮಾಡಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ. ಪಕ್ಷದ ವಿಷಯವೇನೇ ಇರಲಿ ಈ ಯೋಜನೆ ಯಶಸ್ವಿಯಾಗಿ ನಡೆದರೆ ನಮ್ಮ ವಿಷಯದಲ್ಲಿ ಜನತೆಯ ವಿಶ್ವಾಸ ಹೆಚ್ಚುತ್ತದೆ. ಅತಿ ಮುಖ್ಯವಾದ, ಇಡೀ ಭರತಖಂಡದ ರೈತರ ಹಿತವನ್ನುಂಟುಮಾಡುವ, ಜನತೆಗೆ ಉಪಯುಕ್ತವಾದ ಈ ನ್ಯಾಷನಲ್ ಪ್ಲಾನಿಂಗ್ ಯೋಜನೆಯನ್ನು ತಿಳಿದು, ಟೀಕೆಮಾಡುವುದನ್ನು ಬಿಟ್ಟು ಇದಕ್ಕೆ ಉತ್ತೇಜನ ಕೊಡಬೇಕೆಂದು ಪ್ರಾರ್ಥಿಸುತ್ತೇನೆ. ಈ ವಿಷಯಕ್ಕೆ ಹೃತ್ಪೂರ್ವಕವಾದ ಸಹಾಯ ಸಹಕಾರ ನಮ್ಮ ಜನರು ನೀಡಬೇಕಾದ್ದು ಆದ್ಯ ಕರ್ತವ್ಯವೆಂದು ನಾನು ಸಹ ಭಾವಿಸುತ್ತೇನೆ. ಈ ವಿಚಾರದಲ್ಲಿ ಸರ್ಕಾರದಲ್ಲಿ ಪ್ರಾರ್ಥನೆ ಮಾಡುವುದೇನೆಂದರೆ ಎಕ್ಸ್‌ಟೆನ್ಷನ್ ಬ್ಲಾಕುಗಳೆಂದು ನೀವೇನು ಮಾಡುತ್ತೀರೋ ಅದನು ಮಾಡುವಾಗ ಉದಾತ್ತವಾದ ದೃಷ್ಟಿ ಇಟ್ಟು ಕೊಳ್ಳಬೇಕು ಎಂದು. ಪಂಚವಾರ್ಷಿಕ ಯೋಜನೆಯ ಪುಸ್ತಕದಲ್ಲಿ ಬಹಳ ಸೂಚನೆಗಳಿವೆ. Fertility of the soil, density of the scheduled class population, average rainfall, major and minor tanks—ಇಂಥ ಅನೇಕ ಮುಖ್ಯ ಪ್ರಶ್ನೆಗಳಿವೆ. ಮೈನರ್ ಮತ್ತು ಮೇಜರ್ ಕೆರೆಗಳು ಎಲ್ಲಿ ಹೆಚ್ಚಾಗಿವೆ, ಎಷ್ಟಿವೆ ಎಂಬುದನ್ನು ನೋಡಿ ಅಂಥ ಪ್ರದೇಶವನ್ನು ಸಜೆಸ್ಟ್ ಮಾಡಬೇಕೆಂದು ಬರೆದಿದ್ದಾರೆ. ಕಮ್ಯೂನಿಟಿ ಪ್ರಾಜೆಕ್ಟ್ ಎಕ್ಸ್‌ಟೆನ್ಷನ್ ಸ್ಕೀಂ ಮಾಡುವಾಗ ನಾವೆಷ್ಟೋ ಪ್ರಾರ್ಥನೆ ಮಾಡಿದ್ದರೂ ಹೊಳಲ್ಕೆರೆಗೆ ಅದನು ಅನ್ವಯಿಸಲಿಲ್ಲ. ನಮವರೂ ಕೂಡ ಇದರಿಂದ ಪರಿಪೂರ್ಣ ಸಹಾಯ ಹೊಂದಬೇಕೆಂಬ ಅಭಿಲಾಷೆಯಿರುವುದರಿಂದ ಮುಂದಿನಸಲವಾದರೂ ನಮಗೆ ಇದರ ಸೌಲಭ್ಯವನ್ನೊದಗಿಸುತ್ತಾರೆಂದು ಸರ್ಕಾರದಲ್ಲಿ ನಂಬಿಕೆಯಿಡುತ್ತೇನೆ.

ಆ ಮೇಲೆ ತೆರಿಗೆ ವಿಚಾರದಲ್ಲಿ ಶ್ರೀ ಮುಲ್ಕ ಗೋವಿಂದರೆಡ್ಡಿಯವರು ಒಂದೆರಡು ಮಾತನ್ನು ಹೇಳಿದರು. ಇದನ್ನು ಕೊಡಬೇಕಾದ್ದು ಆದ್ಯ ಕರ್ತವ್ಯ. ಈ ದಿವಸ ಸಿಗರೇಟಿಗೆ ಒಂದಕ್ಕೆ ಎರಡರಷ್ಟು ಬೆಲೆ ಜಾಸ್ತಿ ಯಾಗಿರುವುದು ನಿಜ. ಆದರೆ ಅದರ ಮೇಲೆ ಹೆಚ್ಚಾದ ತೆರಿಗೆ ಕೊಡುವವರು ಯಾರು ? ಅನುಕೂಲಸ್ಥರು ಹಣವಂತರಲ್ಲಿರುವ ಹಣ, ಸಂಪತ್ತು ತೆರಿಗೆಗಳ ಮೂಲಕ ನಮ್ಮ ದೇಶಕ್ಕೆ ದೊರೆತು ಸಹಾಯವಾಗುತ್ತದೆ. ಇಂಥಹ ನ್ಯಾಷನಲ್ ಸೆಂಟಿಮೆಂಟನ್ನು ನಮ

(ಶ್ರೀ ಜಿ. ಶಿವಪ್ಪ.)

ಜನರಲ್ಲಿ ಹುಟ್ಟುವಂತೆ ಮಾಡಬೇಕಾದ್ದು ನಮ್ಮ ಆದ್ಯ ಕರ್ತವ್ಯ. ಇಷ್ಟು ಹೇಳಿ ನಾಲ್ಕು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸುತ್ತೇನೆ.

Sri MULKA GOVINDA REDDY.—On a point of personal explanation, Sir. Sri Sivappa made certain statements which are not relevant but which should not go unchallenged.

Sri K. PUTTASWAMY (Srirangapatna).—I want to know whether the Hon'ble member is making a speech?

Mr. CHAIRMAN (Sri S. SRINIVASA IYENGAR).—He is making a personal explanation resulting from the speech of Sri G. Sivappa.

*Sri MULKA GOVINDA REDDY.—Sri Sivappa said that I fully appreciated the relief works that were undertaken by Government. I never discussed with Sri Sivappa and told him that I appreciated the relief measures that were undertaken by Government. On the other hand, I have complained to Sri Sivappa that the relief works undertaken by Government were not adequate and the monies that were spent there were not properly spent. I had issued a statement demanding an enquiry into the utilisation of the funds that were allotted to Chitaldrug District and that more Food depots should be opened, that more relief works should be done and that rural water supply work should be adequately tackled.

*ಶ್ರೀ ಎಚ್. ಕೆ. ಶಿವರುದ್ರಪ್ಪ (ಗುಂಡುಪೇಟೆ–ಹೆಗ್ಗಡದೇವನಕೋಟೆ).—ರಾಜಪ್ರಮುಖರ ಭಾಷಣದ ಮೇಲೆ ಅವರಿಗೆ ವಂದನೆಯನ್ನರ್ಪಿಸಲು ಸೂಚಿಸಿರುವ ನಿರ್ಣಯದ ಮೇಲೆ ಕೆಲವು ಮಾತುಗಳನ್ನು ಹೇಳಲು ಅಪೇಕ್ಷಿಸುತ್ತೇನೆ. ಶ್ರೀಮನ್ಮಹಾರಾಜರವರು ಪ್ರಸ್ತಾಪ ಮಾಡಿರುವಂತೆ ಬಳ್ಳಾರಿಯ ಜನತೆಯ ಪ್ರತಿನಿಧಿಗಳಾಗಿ ಈ ದಿವಸ ನಮ್ಮ ಅಸೆಂಬ್ಲಿಗೆ ಬಂದಿರತಕ್ಕ ನಾಲ್ಕು ಜನ ಸದಸ್ಯರು ಮತ್ತು ಒಬ್ಬ ಸಚಿವರನ್ನು ನಾವು ಸ್ವಾಗತಿಸತಕ್ಕದ್ದು ನಮ್ಮ ಆದ್ಯ ಕರ್ತವ್ಯ. ಆ ಸದಸ್ಯರು ಮತ್ತು ಡಾಕ್ಟರ್ ನಾಗನಗೌಡರು ತಮ್ಮ ಒಂದು ವಿಶೇಷ ಅನುಭವವನ್ನು ನಮ್ಮ ದೇಶಕ್ಕೆ ನೀಡಬೇಕೆಂದು ಪ್ರಾರ್ಥಿಸುತ್ತೇನೆ. ಹೀಗೆ ಒಂದು ವಿಚಾರವನ್ನು ಶ್ರೀಮನ್ಮಹಾರಾಜರು ಪ್ರಸ್ತಾಪಿಸಿದರೂ ಸಹ ಬಳ್ಳಾರಿಗೆ ಸ್ವಾಗತವನ್ನು ಕೊಡುವಾಗ ನಮ್ಮ ಇಡೀ ಕರ್ಣಾಟಕದ ವಿಷಯವನ್ನು ಇಲ್ಲಿ ಪ್ರಸ್ತಾಪಿಸದೆ ಬಿಟ್ಟಿರುವುದು ಶೋಚನೀಯ. ಈ ಒಂದು ರಾಜ್ಯ ನಿರ್ಮಾಣವಾಗುವ ವಿಚಾರದಲ್ಲಿ ಜನರೆಷ್ಟು ಕಾತರರಾಗಿದ್ದಾರೆ ಮತ್ತು ಇದಕ್ಕೆ ಮೈಸೂರು ಸರ್ಕಾರದವರೇನು ಕಾರ್ಯಕ್ರಮ ಕೈಗೊಂಡಿದ್ದಾರೆ ಎಂಬುದನ್ನು ಇಲ್ಲಿ ಪ್ರಸ್ತಾಪಿಸಿದ್ದರೆ ಬಹಳ ಚೆನ್ನಾಗಿತ್ತು ಎಂದು ಈ ಸಂದರ್ಭದಲ್ಲಿ ತಿಳಿಸಬಯಸುತ್ತೇನೆ. ಎರಡನೆಯದಾಗಿ ನಮ್ಮ ದೇಶದಲ್ಲಿ ಅನೇಕ ವರ್ಷಗಳಿಂದ ಮಳೆ ಬೆಳೆಗಳಿಲ್ಲದೆ ಈ ಸಾರಿ ಅನುಕೂಲವಾದಂಥ ಮಳೆ ಬೆಳೆ ಆಗಿ ದೇಶ ಸುಭಿಕ್ಷವಾಗಿರತಕ್ಕಂಥಾದ್ದು ಒಂದು ಸಂತೋಷದ ವಿಷಯವಾದರೂ ನಮ್ಮ ದೇಶದಲ್ಲುಂಟಾಗಿದ್ದ ಒಂದು ಕೊರತೆಯನ್ನು ನಿವಾರಣೆ ಮಾಡುವ ಉದ್ದೇಶದಿಂದ ನಮ್ಮ ಸರ್ಕಾರದವರು ಏನೊಂದು ಕಾರ್ಯಕ್ರಮ ಕೈಗೊಂಡಿದ್ದಾರೆ ಎಂದು ನೋಡಿದ ಪಕ್ಷದಲ್ಲಿ ಎಲ್ಲಿ ನೀರಾವರಿ ಯೋಜನೆಗಳನ್ನು ಜಾರಿಗೆ ತರುವುದಕ್ಕೆ ಸಾಧ್ಯವಿಲ್ಲವೋ ಅಂಥ ಕಡೆ ಸರ್ಕಾರದವರೇನು ಮಾಡಿದ್ದಾರೆಂದು ನೋಡಿದರೆ ನಿಜವಾಗಿಯೂ ಬಹಳ ಶೋಚನೀಯವಾಗುತ್ತದೆ. ಅನೇಕ ಕಡೆ ಜಲಾಶಯಗಳ ನಿರ್ಮಾಣ, ಕೆರೆಕಟ್ಟೆಗಳ ನಿರ್ಮಾಣ ಆಗುತ್ತಿದ್ದರೂ ಇನ್ನೂ ಅನೇಕ ಕಡೆ ಇಂಥ ಅನುಕೂಲಗಳು ಕಲ್ಪಿತವಾಗಿಲ್ಲ. ಅದಕ್ಕೆ ನಾನೊಂದು ಸಲಹೆಯನ್ನು ಕೊಡುವುದಾದರೆ ಎಲ್ಲಿ ಇಂಥ ಜಲಾಶಯಗಳು ಮತ್ತು ಅಭಿವೃದ್ಧಿ ಕಾರ್ಯಗಳನ್ನು ಮಾಡುವುದಕ್ಕೆ ಸಾಧ್ಯವಿಲ್ಲವೋ ಅಂಥ ಕಡೆಗೆ ವಿದ್ಯುಚ್ಛಕ್ತಿಯನ್ನು ಹೆಚ್ಚು ಹೆಚ್ಚಾಗಿ ಕೊಡುವುದರ ಮೂಲಕ ಅಭಿವೃದ್ಧಿ ಮಾಡಲಿಕ್ಕೆ ಪ್ರಯತ್ನ ಮಾಡಿ ವ್ಯವಸಾಯಕ್ಕೆ ಅನುಕೂಲ ಕಲ್ಪಿಸಿಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಈ ದಿನ ಆಹಾರ ಪದಾರ್ಥಗಳ ಅಭಾವ ದೇಶದಲ್ಲಿ ಸ್ವಲ್ಪ ಮಟ್ಟಿಗೆ ಕಡಿಮೆಯಾಗಿದೆ. ಸರ್ಕಾರದವರು ಈ ವಿಚಾರದಲ್ಲಿ ಮುಂಜಾಗ್ರತೆಯ ಕ್ರಮವನ್ನು ಕೈಗೊಂಡಿರುವುಕ್ಕಾಗಿ ಹೃತ್ಪೂರ್ವಕವಾಗಿ ಅವರನ್ನು ವಂದಿಸುತ್ತೇನೆ. ಇನ್ನು ಮುಂದೆ ಆಹಾರ ಪದಾರ್ಥಗಳ ಅಭಾವ ಪರಿಸ್ಥಿತಿ ನಮ್ಮ ದೇಶದಲ್ಲಿ ತಲೆದೋರದಂತೆ ಮುಂಜಾಗ್ರತೆ ಕ್ರಮವನ್ನು ಈಗಿನಿಂದಲೇ ಕೈಗೊಳ್ಳುವುದು ಅತ್ಯಾವಶ್ಯಕ. ಈ ವಿಚಾರದಲ್ಲಿ ಇವುಗಳ ಧಾರಣೆವಾಸಿಗಳೇ ಇಳಿಯುವಾಗ ಆ ದೆಸೆಯಿಂದ ರೈತರಿಗೆ ಉಂಟಾಗತಕ್ಕ ತೊಂದರೆಯನ್ನು ತಪ್ಪಿಸಲು ಸರ್ಕಾರದವರು ತಕ್ಕ ಏರ್ಪಾಡು ಮಾಡಬೇಕು. ಈಗಾಗಲೇ ಬತ್ತದ ವಿಚಾರದಲ್ಲಿ ಒಂದು ceiling price ನಿಗದಿಮಾಡಿ ರೈತರಿಗೆ ಸೂಕ್ತ ಭರವಸೆಯನ್ನು ಕೊಟ್ಟಿರುತ್ತಾರೆ. ಹಾಗೆಯೇ ಈಗ ರಾಗಿ ಮತ್ತು ಜೋಳದ ಧಾರಣೆ ಪಲ್ಲಾ ಒಂದಕ್ಕೆ 40-45 ರೂಪಾಯಿಗಳಂತೆ ಮಾರಾಟವಾಗುತ್ತಿದ್ದುದು 25-28 ರೂಪಾಯಿಗಳಿಗೆ ಮಾರಾಟವಾಗುತ್ತಿದೆ. ಅಂದರೆ ಸುಮಾರು 14 ರೂಪಾಯಿಗಳ ಇಳಿವರಿ ಬಿತ್ತು. ಇದೇ ಪರಿಸ್ಥಿತಿ ಇತರ ಧಾನ್ಯಗಳಿಗೂ ಉಂಟಾಗಿದೆ. ನಮ್ಮ ದೇಶದ ಬಹುಭಾಗದ ರೈತರು ಹಳ್ಳಿಗಳಲ್ಲಿಯೇ ವಾಸವಾಗಿ, ಹೆಚ್ಚಾಗಿ ರಾಗಿ ಜೋಳಗಳನ್ನೇ ಬೆಳೆಯುವುದರಿಂದ ಅವರ ಮೇಲೆ ಕೃಪೆಯಿಟ್ಟು ಸರ್ಕಾರದವರು ಆ ಧಾನ್ಯಗಳಿಗೂ ceiling price ಗೊತ್ತುಮಾಡುವುದು ಅತ್ಯಾವಶ್ಯಕ. ಇದನ್ನು ಅತ್ಯಗತ್ಯವಾಗಿ ಮಾಡಬೇಕೆಂದು ಸರ್ಕಾರದರಿಗೆ ಒತ್ತಾಯಪೂರ್ವಕವಾಗಿ ತಿಳಿಸುತ್ತೇನೆ. ಯುದ್ಧಕಾಲದ ಪರಿಸ್ಥಿತಿಯಲ್ಲಿ ಧಾರಣೆವಾಸಿಗಳು ರೈತರಿಗೆ ಬಹಳ ಅನುಕೂಲವಾಗಿದ್ದುವು. ಈಗಿನ ಸರ್ಕಾರದ ನೀತಿ ಆಹಾರ ಸಾಮಗ್ರಿಗಳ ವಿಚಾರದಲ್ಲಿ ಸಡಿಲವಾಗಿರುವುದರಿಂದ ರೈತರಿಗೆ ಏನೂ ಪ್ರಯೋಜನವಿಲ್ಲದಹಾಗಾಗಿದೆ. ಈಗ ಧಾನ್ಯಗಳ ಧಾರಣೆ ವಾಸಿಗಳು ಇಳಿವು ಆಗಿರುವಾಗ ರೈತರನ್ನು ಸರ್ಕಾರ ಕೈಬಿಟ್ಟರೆ ಅವರಿಗೆ ದ್ರೋಹ ಮಾಡಿದ ಹಾಗಾಗುತ್ತದೆ. ಈ ಬಗ್ಗೆ ತಾವು ಕಾರ್ಯಕ್ರಮ ಕೈಗೊಂಡು ರೈತರು

ಬೆಳೆವ ದವಸ ಧಾನ್ಯಗಳ ಬೆಲೆಯ ಬಗ್ಗೆ ಒಂದು ಭರವಸೆ ಕೊಟ್ಟರೆ ಒಳ್ಳೆಯದು.

ಇನ್ನು ರಾಷ್ಟ್ರಾಭಿವೃದ್ಧಿ ಕಾರ್ಯ ವಿಸ್ತರಣದ ಬಗ್ಗೆ ಸರ್ಕಾರದವರು ಈಗಾಗಲೇ ಪ್ರಬಲ ಕಾರ್ಯ ಕ್ರಮವನ್ನು ಕೈಗೊಂಡು ಈ ಬಗ್ಗೆ ಏಳು ಬ್ಲಾಕ್‌ಗಳ ಕೆಲಸ ನಡೆಯಲು ನಮ್ಮ ಗಂಡ್ಲುಪೇಟೆ ತಾಲ್ಲೂಕಿಗೆ ಸಹಾಯ ಮಾಡಿರುತ್ತೀರಿ. ಇದಕ್ಕಾಗಿ ಆ ತಾಲ್ಲೂಕಿನ ಜನರು ತಮಗೆ ಕೃತಜ್ಞರು. ಆದರೆ ಈ ವಿಸ್ತರಣ ಯೋಜನೆಯ ಕಾರ್ಯ ಪ್ರಾರಂಭವಾಗಿ 4-6 ತಿಂಗಳುಗಳಾದರೂ ಸರ್ಕಾರದವರು ಈ ಬಗ್ಗೆ ಹೆಚ್ಚಿನ ಆಸಕ್ತಿವಹಿಸಿಲ್ಲ. ಈಗಾಗಲೇ ಈ 4-6 ತಿಂಗಳು ವೃಥಾ ಕಾಲಹರಣವಾಗಿ ಅಭಿವೃದ್ಧಿ ಕಾರ್ಯ ಕುಂಠಿತವಾಗಿದೆ. ಈಗಲಾದರೂ ಸಹ ಇವನ್ನು ಸಾಧ್ಯವಾದಷ್ಟು expedite ಮಾಡತ್ತೀರೆಂದು ಭಾವಿಸಿದ್ದೇನೆ. ಈ ಬ್ಲಾಕ್ಸ್ ಸೇತುವೆಗಳನ್ನು ಕಳುಹಿಸಿರುತ್ತೀರಿ. ಆದರೂ ಸರಿಯಾದ literature ಒದಗಿಸಿಲ್ಲ. ಈ ವಿಚಾರದಲ್ಲಿ ತೀವ್ರಗಮನವನ್ನು ಕೊಡಬೇಕೆಂದು ಸರ್ಕಾರದವರನ್ನು ಕೋರುತ್ತೇನೆ.

ಪಂಚವಾರ್ಷಿಕ ಯೋಜನೆಯ ಬಗ್ಗೆ ಅಭಿವೃದ್ಧಿ ಕಾರ್ಯ ಕೈಗೊಳ್ಳುವುದಕ್ಕೆ ಸಾಲವನ್ನು ಎತ್ತುವುದು ಮತ್ತು ಹೊಸ ಹೊಸ ತೆರಿಗೆಗಳನ್ನು ಹಾಕುವುದು ಎಂದು ಮುಂತಾಗಿ ಭಾಷಣದಲ್ಲಿ ಪ್ರಸ್ತಾಪಿಸಿವೆ. ಈಗಾಗಲೇ ದೇಶದಲ್ಲಿ ಜನರ ಮೇಲೆ ಅನೇಕ ವಿಧವಾದ ತೆರಿಗೆಗಳು ಹಾಕಲ್ಪಟ್ಟು ಅವುಗಳಿಂದ ಅವರಿಗೆ ವಿಶೇಷವಾಗಿ ತೊಂದರೆ ಉಂಟಾಗುತ್ತಿರುವಾಗ ಇನ್ನೂ ಹೆಚ್ಚು ತೆರಿಗೆಗಳನ್ನು ಅವರು ಹೊರಲು ತಯಾರಾಗಿಲ್ಲ. ಈ ರೀತಿ ಹೇರುವುದಾದರೆ ನಿಜವಾಗಿಯೂ ಅವು ಜನರಿಗೆ ಒಂದು ಹೊರೆಯಾಗಿ ಪರಿಣಮಿಸುತ್ತವೆ. ಆದಷ್ಟು ಇವುಗಳನ್ನು ಕಡಮೆಮಾಡಬೇಕೆಂದು ಪ್ರಾರ್ಥನ ಮಾಡುತ್ತೇನೆ.

ಡಿಸ್ಟ್ರಿಕ್ಟ್ ಬೋರ್ಡ್ ತಿದ್ದುಪಡಿ ಮಸೂದೆ ಈಗಾಗಲೇ ಸಭೆಯ ಅಂಗೀಕಾರ ಪಡೆದಿದೆ. ಈ ವಿಚಾರದಲ್ಲಿ ಮಾತನಾಡಬೇಕಾದ ಅವಶ್ಯಕತೆ ಇಲ್ಲದಿದ್ದರೂ ನಾನು ಮಾತ್ರ ಈ ಡಿಸ್ಟ್ರಿಕ್ಟ್ ಬೋರ್ಡ್‌ಗಳನ್ನು ರದ್ದು ಪಡಿಸುವ ವಿಚಾರಕ್ಕೆ ವಿರುದ್ಧನಾಗಿದ್ದೇನೆಂಬ ಅಂಶವನ್ನು ಈ ಸಮಯದಲ್ಲಿ ವ್ಯಕ್ತಪಡಿಸುತ್ತೇನೆ. ಇದಕ್ಕೆ ಬದಲು ತಾಲ್ಲೂಕು ಬೋರ್ಡ್‌ಗಳು ರಚಿತವಾದರೆ ಅವುಗಳಿಂದ ಜನರು ನಿರೀಕ್ಷಿಸುವಷ್ಟು ಫಲ ದೊರಕಲಾರದು. ಇಂಥ ಕಾರ್ಯವನ್ನು ಸರ್ಕಾರದವರು ಕೈಕೊಂಡರೆ ಪ್ರಜಾಪ್ರಭುತ್ವಕ್ಕೆ ಅಪಚಾರ ಮಾಡಿದಂತಾಗುತ್ತದೆ.

ಇನ್ನು ಮಿಕ್ಕ ವಿಚಾರದಲ್ಲಿ ಶ್ರೀಮನ್ ಮಹಾರಾಜರು ವಿವೇಕಯುತವಾದ ಸಲಹೆಗಳನ್ನು ಪ್ರಸ್ತಾಪಮಾಡಿರುತ್ತಾರೆ. ಇಷ್ಟು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಎಸ್. ಗೋಪಾಲಗೌಡ (ಸಾಗರ—ಹೊಸನಗರ).—ಮಾನ್ಯ ಅಧ್ಯಕ್ಷರೇ, ಮೈಸೂರು ರಾಜ್ಯ ಪಾಲಕರಾದ ರಾಜಪ್ರಮುಖರು ಹನ್ನೊಂದನೆಯ ತಾರೀಖು ವಿಧಾನ ಸಭೆಯ ಮತ್ತು ಪರಿಷತ್ತಿನ ಜಂಟಿ ಅಧಿವೇಶನದಲ್ಲಿ ದಯಪಾಲಿಸಿದ ಭಾಷಣದ ಮೇಲೆ ನಾನು ಈ ರೀತಿ ವಿಮರ್ಶೆಯನ್ನು ಮಾಡಲು ಇಚ್ಛಿಸುತ್ತೇನೆ.

ಮೊದಲನೆಯದಾಗಿ, ಭಾಷಣದ ಮೇಲೆ ಚರ್ಚೆಯು ಈ ಸಭೆಯಲ್ಲಿ ಮೂರು ದಿನವೇ ನಡೆಯಬೇಕಾದುದು ಸಂಪ್ರದಾಯವಾಗಿತ್ತು. ಈ ಸಂಪ್ರದಾಯವನ್ನು ಸರ್ಕಾರದವರು ಸಾಕಷ್ಟು ಕಾರಣವಿಲ್ಲದಿದ್ದರೂ ಕೈಬಿಟ್ಟಿರುತ್ತಾರೆ. ಇದರಿಂದ ಸಭೆಯ ಮಾನ್ಯ ಸದಸ್ಯರು ಸರ್ಕಾರದ ಧೋರಣೆಯ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಲು ಇದ್ದ ಮೊದಲ ಅವಕಾಶವನ್ನು ಕಿತ್ತುಕೊಂಡಂತೆ ಆಗಿದೆ ಎಂದು ಹೇಳದೆ ವಿಧಿ ಇಲ್ಲ.

ಎರಡನೆಯದಾಗಿ, ಈ ಭಾಷಣದಲ್ಲಿ ಪ್ರಾಮುಖ್ಯವಾಗಿ ಪ್ರಸ್ತಾಪಿಸಿರುವ ಘಟನೆ, ಬಳ್ಳಾರಿಯ ಏಳು ತಾಲ್ಲೂಕುಗಳು ಮೈಸೂರು ಸಂಸ್ಥಾನದಲ್ಲಿ ಸಮಾವೇಶಗೊಂಡು ಅಲ್ಲಿಂದ ಈ ಸಭೆಗೆ ನಾಲ್ಕು ಮಂದಿ ಮಾನ್ಯ ಸದಸ್ಯರು ಮತ್ತು ಒಬ್ಬರು ಮಂತ್ರಿಗಳು ಬಂದಿರುವ ವಿಚಾರ. ಬಳ್ಳಾರಿಯನ್ನು ಮತ್ತು ಅಲ್ಲಿಂದ ಈ ಸಭೆಗೆ ಬಂದಿರತಕ್ಕ ಮಾನ್ಯ ಸದಸ್ಯರನ್ನು ನಾನು ಸ್ವಾಗತಿಸುತ್ತಾ ಒಂದು ವಿಷಯವನ್ನು ಸರ್ಕಾರದ ಗಮನಕ್ಕೆ ತರಬೇಕೆಂದು ಇಚ್ಛೆಪಡುತ್ತೇನೆ. ಏನೆಂದರೆ, ಬಳ್ಳಾರಿಯ ಜನತೆ ಮೈಸೂರಿನೊಡನೆ ಸೇರಲು ತನ್ನ ಉತ್ಸಾಹವನ್ನು ಪ್ರಕಟಿಸಿದ್ದು. ಇದೇ ಸಮಯದಲ್ಲಿ ಮಹತ್ತರವಾದ ಒಂದು ನಿರೀಕ್ಷೆಯನ್ನು ಕೂಡ ಬಳ್ಳಾರಿಯ ಜನತೆ ಇಟ್ಟುಕೊಂಡಿದೆ, ಏನೆಂದರೆ, ಮೈಸೂರಿನೊಡನೆ ಸೇರುವುದರಿಂದ ನಮ್ಮ ಭವಿಷ್ಯ ಉಜ್ವಲವಾಗುತ್ತದೆ, ನಮ್ಮ ಕಷ್ಟಗಳು ನಿವಾರಣೆಯಾಗುತ್ತವೆ ಮತ್ತು ನಮ್ಮ ಜನಜೀವನ ಉತ್ತಮವಾಗುತ್ತದೆ ಎಂಬ ನಿರೀಕ್ಷಣೆ. ಈ ನಿರೀಕ್ಷೆ ಕಾರ್ಯಗತವಾಗುವುದಕ್ಕೆ ಮುಂಚೆ ಅವರು ಸರ್ಕಾರದಿಂದ ನಿರೀಕ್ಷಿಸಿದ್ದು ಒಂದು ವಿಷಯ. ಏನೆಂದರೆ, ಬಳ್ಳಾರಿಯ ಬಗ್ಗೆ ಮೈಸೂರು ಸರ್ಕಾರದವರು ತಕ್ಷಣದಲ್ಲಿ ಕೈಗೊಳ್ಳುವ ಯೋಜನೆಗಳು ಮತ್ತು ಧೋರಣೆ. ಈ ಧೋರಣೆಯನ್ನು ಇದುವರೆಗೂ ಕೂಡ ಸ್ಪಷ್ಟವಾದ ಮಾತಿನಲ್ಲಿ ಮೈಸೂರು ಸರ್ಕಾರ ಪ್ರಕಟಿಸದೆ ಇರುವುದು ಅದರ ಒಂದು ದೊಡ್ಡ ಕ್ರಿಯಾಲೋಪವೆಂದು ಹೇಳಬೇಕಾಗಿದೆ.

ಅವರು ಅನೇಕ ವಿಷಯಗಳ ಬಗ್ಗೆ ಮೈಸೂರಿನ ಕಡೆಗೆ ನೋಡುತ್ತಿದ್ದಾರೆ.

ಅವರ ಕೈಗಾರಿಕೆಗಳ ಅಭಿವೃದ್ಧಿ, ಅವರ ಖನಿಜ ಸಂಪತ್ತನ್ನು ಶೋಷಣೆಮಾಡುವ ವಿಷಯ ಮತ್ತು ತುಂಗಭದ್ರಾದಲ್ಲಿ ಉಚ್ಚಮಟ್ಟದ ಕಾಲುವೆಯನ್ನು ಕೈಕೊಳ್ಳುವ ವಿಷಯ ಮತ್ತು ಅವರ ವಿದ್ಯಾಭ್ಯಾಸದ ಸೌಕರ್ಯವನ್ನು ಹೆಚ್ಚಿಸುವ ಮತ್ತು ಮಾರ್ಪಾಟು ಮಾಡುವ ವಿಷಯ ಅಲ್ಲದೆ ಮೈಸೂರಿನೊಡನೆ ಹೊಂದಿಕೊಳ್ಳಲಿಕ್ಕೆ ಮೂಲಭೂತವಾಗಿ ಮಾಡಬೇಕಾಗಿರುವ ಅನೇಕ ಬದಲಾವಣೆಗಳ ವಿಷಯವಾಗಿ ಅವರ ಮನಸ್ಸಿನಲ್ಲಿ ಕಾತರ ಮತ್ತು ಕಳವಳಗಳು ಇನ್ನೂ ಇವೆ. ಅವುಗಳನ್ನು ಹೋಗಲಾಡಿಸುವುದಕ್ಕೆ ಮೈಸೂರು ಸರ್ಕಾರದವರು ಯಾವ ಒಂದು ಧೋರಣೆಯನ್ನು ಕೂಡ ಬಳ್ಳಾರಿ ಜನತೆಗೆ ಇದುವರೆಗೂ ಕೊಟ್ಟಿಲ್ಲ, ಕೊಡಬೇಕಾದದ್ದು ಅತ್ಯಾವಶ್ಯಕ ಎಂದು ಹೇಳಿ ನಾನು ಈ ಸಮಯದಲ್ಲಿ ಹೇಳಲಿಚ್ಛಿಸುತ್ತೇನೆ. ಇನ್ನೊಂದು ವಿಷಯ...

Sri H. SIDDAVEERAPPA.—You may kindly see the supplementary Budget. After all it is hardly three months. Are these criticisms justified? You please search within yourself.

ಶ್ರೀ ಎಸ್. ಗೋಪಾಲಗೌಡ.—ತಾವು ಏನು ಮಾಡುತ್ತೀರಿ ಎಂಬುದನ್ನು ಹೇಳುವುದಕ್ಕೆ ಹೆಚ್ಚು ಕಾಲ ಬೇಕಾಗುವುದಿಲ್ಲ, ಧೋರಣೆಯನ್ನು ವ್ಯಕ್ತಪಡಿಸಬೇಕು.

ಶ್ರೀ ಎ. ಭೀಮಪ್ಪನಾಯಕ್ (ಮೊಳಕಾಲ್ಮುರು).—ಮೊದಲನೆಯ ದಿವಸ ಮುಖ್ಯ ಮಂತ್ರಿಗಳು ಭಾಷಣ ಮಾಡಿದಾಗ ಏನು ಅನುಕೂಲತೆಗಳನ್ನು ಮಾಡಿಕೊಡಬೇಕು ಎಂಬುದನ್ನು ತಿಳಿಸಿದ್ದಾರೆ.

ಶ್ರೀ ಎಸ್. ಗೋಪಾಲಗೌಡ.—ಆ ಭಾಷಣದ ವೈಖರಿಯನ್ನು ಪ್ರಸ್ತಾಪಮಾಡುವುದಕ್ಕೆ ನಾನು ಇಷ್ಟಪಡುವುದಿಲ್ಲ. ಇನ್ನೊಂದು ಸಂದರ್ಭದಲ್ಲಿ ಹೇಳುತ್ತೇನೆ. ಇನ್ನೊಂದು ಅಷ್ಟೇ ಮುಖ್ಯವಾದ ಘಟನೆ ಎಂದು ನಾನು ಭಾವಿಸುತ್ತೇನೆ. ಆ ಘಟನೆಯ ಬಗ್ಗೆ ಭಾಷಣದಲ್ಲಿ 'ಚ' ಕಾರ ಕೂಡ ಇಲ್ಲ. ಬಹುಶಃ ಅದು ಸಬ್‌ಜ್ಯುಡೀಸ್ ಎಂದು ಕೈಬಿಟ್ಟಿರಬಹುದು. ಅದೇನೆಂದರೆ. ದಸರಾ ಸಮಾರಂಭದ ಕಾಲದಲ್ಲಿ ಮೈಸೂರು ಅರಮನೆ ಎದುರಿಗೆ ಗುಂಡಿನ ಏಟಿನಿಂದ ಹೆಣಗಳು ಬೀಳುವಂತೆ ಮಾಡಿದ ಪ್ರಕರಣ.

Sri H. SIDDAVEERAPPA.—I rise to a point of order, Sir. In the course of an interpellation, it was brought to the notice of the Hon'ble House that cases had been filed in courts of law and were pending, and the entire matter is *sub-judice*. I think if my Hon'ble Friend is allowed to make any comments then I cannot allow him to go unchallenged, in which case I will have to refer to some of the facts. I am sure we will both be liable to contempt of court if we referred to anything which is the subject-matter in a court of law. I hope, Sir, he will not be allowed to make any reference to it.

Mr. CHAIRMAN.—I entirely agree with the Hon'ble Minister. The Hon'ble Member will not make any reference about that incident.

ಶ್ರೀ ಎಸ್. ಗೋಪಾಲಗೌಡ.—ಎರಡನೆಯದಾಗಿ ಆಹಾರದ ಬೆಳೆಯ ವಿಷಯದಲ್ಲಿ, ಮಳೆ ಬೆಳೆಗಳ ಪರಿಸ್ಥಿತಿ ವಿಷಯದಲ್ಲಿ ಪ್ರಸ್ತಾಪಮಾಡುತ್ತಾ ಮಳೆ ಚೆನ್ನಾಗಿ ಆದರೆ, ಬೆಳೆ ಚೆನ್ನಾಗಿ ಬಂದರೆ ನಮ್ಮ ಆಹಾರ ಧೋರಣೆ ಈ ರೀತಿ ಇರುತ್ತದೆ ಎಂದು ಹೇಳಿಕೊಂಡು ಬರತಕ್ಕದ್ದು ರಾಜಪ್ರಮುಖರ, ಸರ್ಕಾರದವರ ಒಂದು ನಿತ್ಯ ಧೋರಣೆಯಾಗಿದೆ. ಇದು ತೀರ ಓಬೀರಾಯನ ಕಾಲದ ಮಾತು ಎಂದು ಹೇಳಿ ನಾನು ಭಾವಿಸಿದ್ದೇನೆ. ಇನ್ನೊಂದು ವಿಷಯವನ್ನು ನಾನು ಬಹಳವಾಗಿ ಸ್ಪಷ್ಟಮಾಡಬೇಕೆಂದು ಇದ್ದೇನೆ. ಏನೆಂದರೆ ಅನೇಕ ಸಂದರ್ಭಗಳಲ್ಲಿ ನಾನು ನೋಡಿದ್ದೇನೆ, ಸರ್ಕಾರದವರು ಭಗವಂತನ ಮೊರೆ ಹೋಗುವುದಾಗಿ ಹೇಳುತ್ತಾರೆ. ಇಲ್ಲಿ ನಾನು ಸ್ಪಷ್ಟವಾಗಿ ಸರ್ಕಾರದವರಿಗೆ ಎಚ್ಚರಿಕೆ ಕೊಡಬೇಕೆಂದು ಹೇಳಿ ಇಷ್ಟಪಡುತ್ತೇನೆ. ಭಗವಂತನ ಹೆಸರನ್ನು ಸರ್ಕಾರದವರು ಇನ್ನು ಮುಂದೆ ದಯವಿಟ್ಟು ದುರುಪಯೋಗಪಡಿಸಿಕೊಳ್ಳಬಾರದು ಎಂದು ಜನತೆಯ ಪರವಾಗಿ ನಾನು ಸರ್ಕಾರದವರಿಗೆ ಎಚ್ಚರಿಕೆ ಕೊಡ ಬಯಸುತ್ತೇನೆ.

AN HON'BLE MEMBER.—Question ?

ಶ್ರೀ ಎಸ್. ಗೋಪಾಲಗೌಡ.—ಭಗವಂತನ ಹೆಸರಿನಲ್ಲಿ ಸರ್ಕಾರ ಎಂತಹ ತಪ್ಪನ್ನಾದರೂ, ಕ್ರಿಯಾಲೋಪವನ್ನಾದರೂ ಮುಚ್ಚಿಕೊಳ್ಳಲಿಕ್ಕೆ ಅವಕಾಶವಿದೆ. ಆದ್ದರಿಂದ ಭಗವಂತನ ಹೆಸರನ್ನು ಇನ್ನು ಮೇಲೆ ಉಪಯೋಗಿಸಿದರೆ, ಸರ್ಕಾರದ ಆಡಳಿತದ ಬಗ್ಗೆ ಉಪಯೋಗಿಸಿದರೆ ಭಗವಂತನ ಆಣೆ ಇದೆ ಎಂದು ಹೇಳಿ ನಾನು ಹೇಳುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ.—ನೀವೇನೇ ಈಗ ದುರುಪಯೋಗಪಡಿಸಿಕೊಂಡಿರಿ !

ಶ್ರೀ ಎಸ್. ಗೋಪಾಲಗೌಡ.—ಮತ್ತು ಇನ್ನು ಮುಂದೆ ಇಷ್ಟು ಸರಾಗವಾಗಿ, ಸುಲಭವಾಗಿ ಭಗವಂತನನ್ನು ಸಾಕ್ಷಿಯಾಗಿ ಮಂತ್ರಿಗಳು ಕರೆಯುವುದಿಲ್ಲ ಎಂದು ಕೂಡ ನಾನು ನಂಬಿದ್ದೇನೆ. ಈ ಸಂದರ್ಭದಲ್ಲಿ ನಾನು ಆಹಾರ ಪರಿಸ್ಥಿತಿ ಮತ್ತು ಸರ್ಕಾರದವರು ಇಟ್ಟುಕೊಳ್ಳಬೇಕಾದ ಧೋರಣೆ ಬಗ್ಗೆ ಒಂದೆರಡು ವಿಷಯವನ್ನು ಮುಂದುವರಿದು ಪ್ರಸ್ತಾಪಿಸುವುದಕ್ಕೆ ಇಷ್ಟಪಡುತ್ತೇನೆ. ಈ ರೀತಿ ಬೆಳೆಯಮೇಲೆ ನಮ್ಮ ಆಹಾರದ ನೀತಿಯನ್ನು ಸ್ಪಷ್ಟಪಡಿಸುವ ನೀತಿ ಬಹಳ ಅಸ್ಪಷ್ಟವಾಗಿರುತ್ತದೆ. ಮತ್ತು ಇದರಿಂದ ಜನತೆಗೆ ಯಾವ ಆಶ್ವಾಸನವನ್ನು ಸರ್ಕಾರ ಕೊಟ್ಟಿದೆ ಎಂದು ನಂಬುವುದಕ್ಕಾಗುವುದಿಲ್ಲ. ಅದಕ್ಕೆ ನಾನು ಈ ಕೆಲವು ಮುಖ್ಯವಾದ ವಿಷಯಗಳನ್ನು ಸರ್ಕಾರದವರು ಗಮನದಲ್ಲಿಟ್ಟುಕೊಂಡು ರಾಜ್ಯಭಾರಮಾಡಬೇಕೆಂದು ಹೇಳಿ ಈ ಸಮಯದಲ್ಲಿ ಹೇಳಬಯಸುತ್ತೇನೆ. ಏನೆಂದರೆ ಈಗ ಬತ್ತಕ್ಕೆ 20-22 ರೂಪಾಯಿಗಳನ್ನು ಬೆಲೆ ಗೊತ್ತು ಮಾಡಿದ್ದೀರಿ. ನನಗೆ ಕಂಡುಬಂದ ಹಾಗೆ ಗಡೀಪ್ರದೇಶಗಳಲ್ಲಿ ಕಾವಲು ಇವೊತ್ತು ಬಹಳ ಸಡಿಲವಾಗಿದೆ. ಈಗಾಗಲೇ ಮುಂಬೈ ಪ್ರಾಂತ್ಯಕ್ಕೆ 5-6 ಸಾವಿರ ಪಲ್ಲ ಬತ್ತ ಸಾಗಿಹೋಗಿದೆ. ಮತ್ತು ಈಗ ಅಲ್ಲಿಗೆ ಹೋಗುತ್ತಾ ಇದೆ. ಕಾರಣ ಅಲ್ಲಿ ಬತ್ತದ ಬೆಲೆ ಹೆಚ್ಚಾಗಿದೆ.

ಶ್ರೀ ಎಚ್. ಸಿದ್ದವೀರಪ್ಪ.—ಡೆಪ್ಯುಟಿ ಕಮೀಷನರವರಿಗೆ ಮೊನ್ನೆತಾನೆ ಟೆಲಗ್ರಾಂ ಕೊಟ್ಟಿದ್ದೇವೆ.

I have already instructed the Deputy Commissioner. By the time you return to your constituency, I hope you will hear good information.

Sri A. BHEEMAPPA NAIK.—In the case of jola, and ragi also which are being exported outside the district will you kindly instruct the Deputy Commissioner, Sir ?

Mr. CHAIRMAN.—This is not question hour please. Sri Gopala Gowda will continue.

ಶ್ರೀ ಎಸ್. ಗೋಪಾಲಗೌಡ.—ಈ ರೀತಿ ಪಕ್ಕದ ಪ್ರಾಂತ್ಯಗಳಲ್ಲಿರುವ ಬೆಲೆಗೂ ನಮ್ಮಲ್ಲಿರುವ ಬೆಲೆಗೂ ವ್ಯತ್ಯಾಸ ಇದ್ದಾಗ ಆ ರೀತಿ ಹೊರಗಡೆ ಹೋಗುವುದನ್ನು ತಡೆಯಬೇಕಾದದ್ದು ಸರ್ಕಾರದ ಆದ್ಯಕರ್ತವ್ಯವಾಗಿದೆ. ಅಲ್ಲದೆ ಈ ಸಂದರ್ಭದಲ್ಲಿ ಇನ್ನೊಂದು ಮುಖ್ಯವಾದ ವಿಷಯ, ಇತರ ಆಹಾರ ಧಾನ್ಯಗಳಿಗೆ, ರಾಗಿ, ಜೋಳ ಇತ್ಯಾದಿ ಧಾನ್ಯಗಳಿಗೆ ಬೆಲೆಯನ್ನು ಗೊತ್ತುಮಾಡದೇ ಇರುವುದು. ಸರ್ಕಾರದವರು ಹೇಳುತ್ತಾರೆ-ಬಹಳವಾಗಿ ಬೆಲೆ ಇಳಿದುಹೋದರೆ, ಅಂಥ ಒಂದು ಪರಿಸ್ಥಿತಿ ಉಂಟಾದರೆ ನಾವು ಹತೋಟಿಯನ್ನು ಮತ್ತೆ ತರುತ್ತೇವೆ, ಬೆಲೆಗಳನು ನಿಗದಿಮಾಡುವುದಕ್ಕೆ ಪ್ರಯತ್ನಪಡುತ್ತೇವೆ ಎಂದು. ಹತೋಟಿ ಎಂದರೆ ಕಂಟ್ರೋಲ್ ಅಲ್ಲ, ಬೆಲೆಯ ಹತೋಟಿ. ಆದರೆ ಇದು ಬಹಳ ಕಷ್ಟವಾಗುತ್ತದೆ. ಎಲ್ಲಿಗೆ ಬೆಲೆ ಇಳಿದು ಹೋದರೆ ಅದು

ಕೆಟ್ಟ ಪರಿಸ್ಥಿತಿ ಎಂದು ಸರ್ಕಾರದವರು ಭಾವಿಸುತ್ತಾರೆ? ನಾವು ಅರ್ಥಮಾಡಿಕೊಳ್ಳುವುದು ಹೇಗೆ? ಬೆಳೆಯುವವರಂತೂ ಅರ್ಥಮಾಡಿಕೊಳ್ಳುವುದಕ್ಕೆ ಸಾಧ್ಯವಾಗದ ವಸ್ತು. ಆದ್ದರಿಂದ ಒಂದು ಕನಿಷ್ಟಬೆಲೆ, ಮೂಲ ಆಹಾರ ಧಾನ್ಯಗಳಿಗೆ ನಿರ್ದಿಷ್ಟಮಾಡತಕ್ಕದ್ದು, ಒಂದು controlled economy ಅಥವಾ ಒಂದು ಯೋಜನೆಯನ್ನು ನಮೂದಿಸತಕ್ಕದ್ದು ಸರ್ಕಾರದ ಕರ್ತವ್ಯವಾಗುತ್ತದೆ. ಅಲ್ಲದೇ ಇದೇ ಸಂದರ್ಭದಲ್ಲಿ ರೈತರಿಗೆ ಹೆಚ್ಚಿನ ಒಂದು ಸೌಲಭ್ಯವನ್ನು ಒದಗಿಸಿಕೊಡಬೇಕೆಂದರೆ ರೈತ ಬೆಳೆದು ಮಾರತಕ್ಕ ವಸ್ತುಗಳಿಗೂ ಮತ್ತು ರೈತ ದಿನ ನಿತ್ಯದಲ್ಲಿ ಕೊಂಡುಕೊಳ್ಳತಕ್ಕಂಥ ವಸ್ತುಗಳಿಗೂ ಬೆಲೆಯಲ್ಲಿ ಒಂದು ಸಾಮರಸ್ಯ parity ಇರತಕ್ಕದ್ದು ಅತ್ಯಗತ್ಯ. ಆರೇಳು ವರ್ಷಗಳಿಂದ ಈ ಒಂದು ವಿಷಯವನ್ನು ಸರ್ಕಾರದವರ ಗಮನಕ್ಕೆ ತಂದರೂ ಕೂಡ, ಪ್ಲಾನಿಂಗ್ ಕಮೀಷನ್‌ರವರು ತಮ್ಮ ಒಂದು ಯೋಜನೆಯಲ್ಲಿ ಇದನ್ನು ಸ್ಪಷ್ಟಪಡಿಸಿದ್ದರೂ ಕೂಡ ಸರ್ಕಾರದವರು ಈ ಒಂದು ಯೋಜನೆಯನ್ನು ಕಾರ್ಯಗತಮಾಡುವುದಕ್ಕೆ ಇದುವರೆಗೂ ಸಮರ್ಥರಾಗಿಲ್ಲ ಎಂದು ಹೇಳಿ ನಾನು ಹೇಳಬೇಕಾಗಿದೆ. ಆದ್ದರಿಂದ ಈ ಒಂದು ವಿಷಯವನ್ನು ಸರ್ಕಾರದವರು ಗಮನದಲ್ಲಿಟ್ಟುಕೊಂಡು ತಕ್ಕಷ್ಟು ವ್ಯವಸ್ಥೆಯನ್ನು ಮಾಡುತ್ತಾರೆ ಎಂದು ನಾನು ನಂಬಿದ್ದೇನೆ.

ಇನ್ನೊಂದು. ಈ ಆಹಾರದ ವಿಷಯದಲ್ಲಿ ಮುಖ್ಯವಾದ ಸಮಸ್ಯೆ ಭೂಮಿಯ ಸಮಸ್ಯೆ, ಇದನ್ನು ಯಾರೂ ಕಡೆಗಾಣಿಸುವುದಕ್ಕೆ ಸಾಧ್ಯವಿಲ್ಲ. ಈ ಹೊತ್ತು ಈ ಭೂಮಿ ಸಮಾನ ಹಂಚಿಕೆ ಆದಹೊರತು, ಭೂಮಿಯ ಉತ್ಪನ್ನ ಅಂದರೆ ಆಹಾರಧಾನ್ಯಗಳ ಉತ್ಪನ್ನ ಹೆಚ್ಚುವುದಕ್ಕೆ ಸಾಧ್ಯವಿಲ್ಲ ಮತ್ತು ಈಗಿರತಕ್ಕಂಥ ಉತ್ಪತ್ತಿಯನ್ನು ನಾವು ಸಮನಾಗಿ ಹಂಚಿಕೊಳ್ಳುತ್ತೇವೆಂದು ಹೇಳಿದರೂ ಕೂಡ ಅದು ಸಮರ್ಪಕವಾಗುವುದಿಲ್ಲ. ಆದ್ದರಿಂದ ಭೂಮಿಯನ್ನು ಸಮಾನವಾಗಿ ಹಂಚಿಕೆ ಮಾಡಿ ಉಳುವವನಿಗೆ ಭೂಮಿ ದೊರೆಯುವುದಕ್ಕೆ ಮತ್ತು ಕೊರತೆಯನ್ನು ತೊಡೆದುಹಾಕುವುದಕ್ಕೆ ತ್ವರಿತವಾಗಿ ಒಂದು ಮಸೂದೆಯನ್ನು ಈ ಸಭೆಯ ಮುಂದೆ ಮಂಡಿಸಬೇಕು ಎಂದು ಈ ಸಮಯದಲ್ಲಿ ಮೈಸೂರು ಸರ್ಕಾರದಲ್ಲಿ ನಾನು ವಿನಂತಿ ಮಾಡುತ್ತೇನೆ.

ಇನ್ನು ಈ ವಿಷಯದಲ್ಲಿ ಮೂರನೆಯದಾಗಿ ನಾನು ಪ್ರಸ್ತಾಪಮಾಡಬಹುದಾದ ಒಂದು ವಿಷಯವೆಂದರೆ ರೈತರ ಸಾಲದ ಹೊರೆಯನ್ನು ಇಳಿಸಲು ಒಂದು ಮಾರಟೋರಿಯಮ್ ಮಸೂದೆಯನ್ನು ಮಾಡಿ ಈ ಸಭೆಯ ಮುಂದೆ ತರಬೇಕು ಮತ್ತು ರೈತರನ್ನು ಸಾಲದ ಹೊರೆಯಿಂದ ವಿಮುಕ್ತರನ್ನಾಗಿ ಮಾಡಿ ಅವರಿಗೆ ಬೇರೆ ವಿಧವಾಗಿ ಸಾಲದೊರೆಯುವಂತೆ ರೈತರ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸುವುದಕ್ಕೆ ಸರ್ಕಾರ ಸಮರ್ಪಕವಾದ ಯೋಜನೆಗಳನ್ನು ಸಿದ್ಧಮಾಡಿ ಕಾರ್ಯಗತ ಮಾಡಬೇಕು ಎಂದು ಕೂಡ ಈ ಸಮಯದಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಇನ್ನು ರಾಷ್ಟ್ರಾಭಿವೃದ್ಧಿ ಯೋಜನೆ ಅನ್ನುವ ವಿಷಯದಲ್ಲಿ ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ: ಈಗಾಗಲೇ ಕಾರ್ಯಗತವಾಗುತ್ತಿರುವ ಸೊರಬ, ಷಿಕಾರಿಪುರಗಳ ಸಮುದಾಯಿಕ ಅಭಿವೃದ್ಧಿ ಯೋಜನೆ ಎಷ್ಟು ಸಫಲವಾಗಿದೆ, ಎಷ್ಟು ಪ್ರಗತಿದಾಯಕವಾಗಿ ನಡೆದಿದೆ ಎಂಬ ವಿಷಯದಲ್ಲಿ ಈ ಭಾಷಣ ಬಹಳ ಗಂಭೀರವಾದ ಮನೋಭಾವವನ್ನು ತಾಳಿದೆ. ಇದರ ಅರ್ಥವನ್ನು ಸಭೆ ಪರಿಗ್ರಹಿಸಬೇಕು. ಸೊರಬ, ಷಿಕಾರಿಪುರದಲ್ಲಿ ನಡೆಯುತ್ತಿರುವ ಸಾಮುದಾಯಿಕ ಯೋಜನೆಯಿಂದ ಇಡೀ ದೇಶದ ಮುಂದಿರುವ ಪಂಚವಾರ್ಷಿಕ ಯೋಜನೆ ಸಫಲವಾಗುವುದಕ್ಕೆ ಅವಕಾಶವಿಲ್ಲ. ನನಗೆ ಗೊತ್ತಿರುವ ಹಾಗೆ ಹೇಳಬೇಕೆಂದರೆ, ಇದು ಪ್ರಗತಿ ದೃಷ್ಟಿಯಿಂದ ಬಹಳ ಕಡಮೆ ಪ್ರಗತಿಯನ್ನು ಸಾಧಿಸಿದೆ. ಈ ಸಮಯದಲ್ಲಿ ನಾನು ಬಹಳ ಗಂಭೀರವಾಗಿ ಟೀಕೆಮಾಡುತ್ತಿದ್ದೇನೆಂದ ಹೇಳಬೇಕಾಗಿದೆ. 12 ಸಾವಿರ ರೂಪಾಯಿಗಳು ಸಿಬ್ಬಂದಿಗೆ ಖರ್ಚಾಗಿದ್ದರೆ 72 ಸಾವಿರ ರೂಪಾಯಿಗಳು ಕೆಲಸಗಳಿಗೆ ಖರ್ಚಾಗಿದೆ. ಅಲ್ಲದೆ ಈಗ ಅಲ್ಲಿ ಒಬ್ಬರು ಅಧ್ಯಕ್ಷರನ್ನು ಬೇರೆ ನೇಮಿಸಿದ್ದಾರೆ. ಅವರಿಗೆ ಏನು ಅಧಿಕಾರಕೊಟ್ಟಿದೆ? ವೇತನ ಎಷ್ಟು? ಎಷ್ಟು ಕೆಲಸ ಅವರು ಮಾಡಬೇಕು? ಇದು ಸ್ಪಷ್ಟವಾಗಿಲ್ಲ. ಅವರು ಪ್ರೋತ್ಸಾಹ ಪಡೆಯತಕ್ಕದ್ದು ಕೂಡ ಕಠಿಣವಾಗಿದೆ. ಮತ್ತು ಅವರು ಕೆಲವು ಬುಲ್‌ಡೋಜರುಗಳು, ಟ್ರ್ಯಾಕ್ಟರುಗಳು ಇತ್ಯಾದಿಗಳಿಗೆ ಏನೊಂದು ಸಲಹೆ ಕೊಟ್ಟಿದ್ದಾರೋ, ಡಿಮ್ಯಾಂಡ್ ಕೊಟ್ಟಿದ್ದಾರೋ ಅದೇಕೆ ಪೂರೈಕೆಯಾಗಿಲ್ಲ? ಸಾಮುದಾಯಿಕ ಯೋಜನೆ ಬಗ್ಗೆ 55 ಲಕ್ಷ ರೂಪಾಯಿಗಳನ್ನು ಕೊಟ್ಟು ಅದನ್ನು ಮೂರು ವರ್ಷಗಳಲ್ಲಿ ಖರ್ಚುಮಾಡಬೇಕೆಂದು ಹೇಳಿದರೆ "we will spend it expeditiously" ಎಂದು ಹೇಳುತ್ತಾರೆ.

Sri H. SIDDAVEERAPPA.—You need not have that apprehension.

ಶ್ರೀ ಎಸ್. ಗೋಪಾಲಗೌಡ.—ಈ ಸಾಮುದಾಯಿಕ ಯೋಜನೆ ನೇರವಾಗಿ ಕೇಂದ್ರ ಸರ್ಕಾರದ ಅಧಿಕಾರಕ್ಕೊಳಪಟ್ಟಿದೆ. ಆದರೆ, ಕೇಂದ್ರಕ್ಕೂ, ಸಂಸ್ಥಾನದಿಂದ ನೇಮಿತವಾಗಿರುವ ಅಧ್ಯಕ್ಷರು ಮತ್ತು ಇಲ್ಲಿನ ಅಧಿಕಾರಿಗಳಿಗೂ ಸಾಮರಸ್ಯ ಕಂಡುಬಂದಿಲ್ಲ ಮತ್ತು ಈ ಅಭಿವೃದ್ಧಿ ಯೋಜನೆ ಕಾರ್ಯಗತವಾಗುವುದಕ್ಕೆ ಬೇಕಾದ ಉತ್ಸಾಹ, ಸಹಕಾರ, ಸಹಾಯ ಇವೆಲ್ಲಾ ಇವೊತ್ತು ಆ ಕ್ಷೇತ್ರದಲ್ಲಿ ಸೊನ್ನೆಯಾಗಿವೆ. ಆದ್ದರಿಂದ ಈ ರೀತಿ ಈ ಯೋಜನೆ ಮುಂದುವರಿದರೆ ಸಫಲವಾಗುತ್ತದೆಯೆ ಎಂಬುದು ಸ್ಪಷ್ಟವಾಗಿದೆ. ಇದರಿಂದ ಖರ್ಚಾದ ಹಣಕ್ಕೆ ತಕ್ಕ ಪ್ರತಿಫಲ ದೊರೆಯುವುದಿಲ್ಲ. ಈ ಯೋಜನೆಗಳನ್ನು ಇನ್ನೂ ಹೆಚ್ಚಿಸಬೇಕೆಂದಿದೆ. ಮುಂಬರುವ ವರ್ಷಗಳಲ್ಲಿ ಈ ಯೋಜನೆಯನ್ನು ಪ್ರಾರಂಭಿಸಿದರೂ ಕೂಡ ವಿಫಲವಾಗುತ್ತದೆ. ಈಗ ನಡೆಯುತ್ತಿರುವ ಯೋಜನೆ ಎಷ್ಟರಮಟ್ಟಿಗೆ ಪ್ರಗತಿಯನ್ನು ಹೊಂದಿದೆ, ಪ್ರಗತಿ ಪಡೆಯದಿರುವುದಕ್ಕೆ ಅಲ್ಲಿರತಕ್ಕ ಅಡ್ಡಿ ಅತಂಕಗಳೇನು, ಇದನ್ನು ಸರಿಪಡಿಸುವುದಕ್ಕೆ ಸರ್ಕಾರ ತಕ್ಷಣ ಏನು ಕಾರ್ಯಕ್ರಮಗಳನ್ನು ಕೈಗೊಳ್ಳಬಹುದು ಎಂಬ ವಿಷಯವನ್ನು ಪರಿಶೀಲಿಸಿ ಆ ವಿಷಯವನ್ನು ಕೇಂದ್ರ ಸರ್ಕಾರದ ಅಧಿಕಾರಿಗಳಿಗೆ ತಿಳಿಸಿ ಇದನ್ನು ತಕ್ಷಣ ಬದಲಾವಣೆ ಮಾಡದೆಹೋದರೆ ಈ ಯೋಜನೆ ದೇಶದ ಮುಂದೆ ಬಾರದಿರುವಹಾಗೆ ದೇಶದ ಜನ, ವಿರೋಧಪಕ್ಷ ದೇಶದ ಬಡ ಬೋರೇಗೌಡನ ಬೊಕ್ಕಸ ಬರಿದಾಗುತ್ತಿದೆಯೆಂದು ತಿಳಿಯುವವರು, ಇವರೆಲ್ಲರೂ ಪ್ರಾಣವನ್ನಾದರೂ ಪಣತೊಟ್ಟು ಹೋರಾಡಿ ಈ ಯೋಜನೆಯನ್ನು ನಿಲ್ಲಿಸುವರು ಎಂಬುದನ್ನು ಇಲ್ಲಿ ನಾನು ಸ್ಪಷ್ಟಪಡಿಸುತ್ತೇನೆ.

ಇನ್ನು ಪಂಚವಾರ್ಷಿಕ ಯೋಜನೆಯ ಅಂಗವಾಗಿ ಮೈಸೂರು ಸಂಸ್ಥಾನದಲ್ಲಿ ಕೈಗೊಂಡಿರುವ ಭದ್ರಾ ಪ್ರಾಜೆಕ್ಟು, ನುಗು ಪ್ರಾಜೆಕ್ಟು ಮತ್ತು ಇತರ ದೊಡ್ಡ ಜಲಾಶಯಗಳ ಕಾಂಗಾರಿಗಳ ಬಗ್ಗೆ ಒಂದೆರಡು ಮಾತು. ಈ ದೊಡ್ಡ ದೊಡ್ಡ ಜಲಾಶಯದ ಕಾಂಗಾರಿಗಳನ್ನು ಕೈಕೊಳ್ಳುವಾಗ ಸರ್ಕಾರ ಖರ್ಚುಮಾಡುವ

(ಶ್ರೀ ಎಸ್. ಗೋಪಾಲಗೌಡ.)

ಹಣದ ಬಗ್ಗೆ ಎಸ್ಟಿಮೇಟುಗಳನ್ನು ತಯಾರುಮಾಡಿ ಹಣ ಖರ್ಚುಮಾಡುವುದನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡಿಕೊಳ್ಳಬೇಕಾದ್ದು ಮೊದಲನೆಯ ಕರ್ತವ್ಯ. ಈ ದಿವಸ ಏನೇ ಹೇಳಿದರೂ ಕೂಡ ಅನೇಕ ಸಂದರ್ಭಗಳಲ್ಲಿ ಖರ್ಚಾಗುವ ಹಣ ಪೋಲಾಗಿದೆಯೆಂದು ನಾನು ವಿಷಾದದಿಂದ ಹೇಳಬೇಕಾಗಿದೆ. ಇದಕ್ಕಾಗಿ ಒಂದು ಪಬ್ಲಿಕ್ ವರ್ಕ್ಸ್ ಕಾರ್ಪೊರೇಷನ್ ಅಥವಾ ಆ ರೀತಿಯ ಒಂದು ಸಂಪೂರ್ಣ ಹಿಡಿತ ಇಟ್ಟುಕೊಂಡು ಎಸ್ಟಿಮೇಟನ್ನು ಪುನಃಪರಿಶೀಲನೆ ಮಾಡಿ ಕೆಲಸವನ್ನು ಪ್ರತಿ ಘಟ್ಟದಲ್ಲೂ ಪರೀಕ್ಷೆ ಮಾಡಿ ಮುಂದಕ್ಕೆ ಸಾಗುವ ಒಂದು ವ್ಯವಸ್ಥೆಯನ್ನು ಮೈಸೂರು ಸರ್ಕಾರ ಕೈಕೊಳ್ಳಬೇಕು. ಇಲ್ಲದಿದ್ದರೆ ಇವೊತ್ತು ಯಾವ ರೀತಿ ಸಂಗನಹಳ್ಳಿ ಮತ್ತು ತುಪ್ಪದಹಳ್ಳಿ ಕೆರೆಗಳು ಒಡೆದ ಹೋಗಿ ಅವನ್ನು ಕಟ್ಟಿಸಲು ಸರ್ಕಾರ ಹೇಗೆ ಖರ್ಚುಮಾಡಬೇಕಾಗಿದೆಯೋ ಆ ರೀತಿಯಲ್ಲಿ ನಷ್ಟವಾಗುವುದೂ, ಖರ್ಚಾಗುವುದೂ ಇನ್ನು ಮುಂದೆ ದಿನ ನಿತ್ಯದ ಘಟನೆಯಾಗಬಹುದು. ಅಲ್ಲದೆ ಅನೇಕ ಲೋಪದೋಷಗಳಿವೆ ಎಂಬುದು ಮಾನ್ಯ ಮಂತ್ರಿಗಳಿಗೂ ಮತ್ತು ನಮ್ಮ ಮಿತ್ರರಿಗೂ ಗೊತ್ತಿರಬಹುದು. ಪಂಚವಾರ್ಷಿಕ ಯೋಜನೆಗೆ ಹಣವನ್ನು ಒದಗಿಸುವಾಗ ಭಾರಿ ಭಾರಿ ಕಾಂಗಾರಿಗಳಿಗೆ ಈ ರೀತಿಯಾಗಿ ವರ್ಷಕ್ಕೆ 50 ಲಕ್ಷ ಖರ್ಚು ಮಾಡುತ್ತಾ ಹೋದರೆ ಭದ್ರಾ ಜಲಾಶಯ ಮುಗಿಯುವ ವೇಳೆಗೆ ಅನೇಕರು ಇರುತ್ತಾರೋ ಇಲ್ಲವೋ. ಭವಿಷ್ಯ ದೃಷ್ಟಿಯಿಂದ ದೊಡ್ಡ ಕಾಂಗಾರಿಗಳನ್ನು ಕೈಗೊಳ್ಳುವುದಾದರೆ ಒಂದು ತಲೆಮಾರಿನಲ್ಲಿ ಕೂಡ ಮುಗಿಯುವುದಿಲ್ಲ ಮತ್ತು ಮುಂದೆ ಬರುವ ಸರ್ಕಾರ ತಮ್ಮ ಸಂಪ್ರದಾಯದ ಸರ್ಕಾರ ಬರುತ್ತದೆ; ಅಭಿವೃದ್ಧಿಕಾರ್ಯ ಮುಂದುವರಿಸಿಕೊಂಡುಹೋಗುತ್ತದೆ ಎಂಬ ಭರವಸೆಯಿಲ್ಲ.

ಇನ್ನೊಂದು ವಿಷಯವನ್ನು ಸರ್ಕಾರದಲ್ಲಿ ಕೇಳಿಕೊಳ್ಳಬೇಕೆಂದಿದೆ.

12-30 P.M.

ಏನೆಂದರೆ, ಈ ಹೊನ್ನೆಮರಡು ಪ್ರಾಜೆಕ್ಟು ಕೈಗೊಳ್ಳುತ್ತೇವೆ ಎಂದು ಈಗ ಸರ್ಕಾರದವರು ಪ್ರಕಟಿಸಿದ್ದಾರೆ. ಆದರೆ ರಾಜಪ್ರಮುಖರು ಭಾಷಣದಲ್ಲಿ ಈ ಬಗ್ಗೆ ಮೌನವನ್ನು ಆಚರಿಸಿದ್ದಾರೆ. ಇದರಿಂದ ಮುಳುಗಡೆ ಪ್ರದೇಶದಲ್ಲಿರುವ ಜನರಿಗೆ ಯಾವ ರೀತಿ ದಾರಿತೋರಿಸುತ್ತೀರಿ ಎಂಬ ಬಗ್ಗೆ ಒಂದು ಕಾತರದ ಪರಿಸ್ಥಿತಿ ತಲೆದೋರಿದೆ. ಈ ಭೀತಿಯನ್ನು ತೊಡೆದು ಹಾಕಲು, ಈ ಹೊನ್ನೆಮರಡು ಪ್ರಾಜೆಕ್ಟನ್ನು ಕೈಗೊಳ್ಳುತ್ತೀರೋ ಅಥವಾ ಇಲ್ಲವೋ, ಕೈಗೊಳ್ಳುವುದಾದರೆ ಯಾವಾಗ, ಆ ಪ್ರಾಜೆಕ್ಟ್ ಎಲ್ಲಿ ನಿರ್ಮಾಣಮಾಡುತ್ತೀರಿ, ಇದಕ್ಕೆ ಎಷ್ಟು ಕಾಲ ಬೇಕಾಗುತ್ತದೆ ಎಂಬುದನ್ನೆಲ್ಲಾ ಸ್ಪಷ್ಟಪಡಿಸಬೇಕಾದುದು ಸರ್ಕಾರದ ಆದ್ಯ ಕರ್ತವ್ಯವೆಂದು ಭಾವಿಸಿದ್ದೇನೆ. ಈ ವಿಚಾರದಲ್ಲಿ ಸರ್ಕಾರದವರು ಮೌನವನ್ನು ಆಚರಿಸಬಾರದೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇದು ಸಾರ್ವಜನಿಕ ಹಿತದೃಷ್ಟಿಯಿಂದ, ಅದರಲ್ಲೂ ಮಲೆನಾಡು ಹಿತದೃಷ್ಟಿಯಿಂದ ತಕ್ಕುದಲ್ಲ. ಆದಷ್ಟು ಬೇಗ ಇದನ್ನು ಕಾರ್ಯಗತ ಮಾಡಬೇಕೆಂದು ಕೋರುತ್ತೇನೆ.

Mr. CHAIRMAN.—How much time do you want? I want to know whether the House is agreeable to sit for half an hour more.

Sri A. BHEEMAPPA NAIK.—Let him continue his speech tomorrow. He does not give any time limit and we cannot afford to sit longer than 12-30. And there is provision for having the discussion on Monday. So let him take it up on Monday.

Mr. CHAIRMAN.—I assured Sri Muniswamiah that after Sri Govinda Reddy he will be permitted to speak. If we sit for half an hour more, I believe we can give him an opportunity but if the House is of the opinion that we can rise and meet on Monday I have absolutely no objection.

Sri K. PATTABHIRAMAN (Kolar).—Let us sit till One of the clock.

Mr. CHAIRMAN.—That is why I wanted to know the opinion of the House.

Sri A. G. RAMACHANDRA RAO (Minister for Law and Education).—We can sit for another half an hour.

Mr. CHAIRMAN.—The House will then sit till One of the clock.

ಶ್ರೀ ಎಸ್. ಗೋಪಾಲಗೌಡ.—ಇನ್ನೊಂದು ವಿಚಾರ, ಪಂಚವಾರ್ಷಿಕ ಯೋಜನೆಗೆ ಸಂಬಂಧಪಟ್ಟ ಹಾಗೆ ನಾನು ಹೇಳಬೇಕಾಗಿದೆ. ಮೈಸೂರು ಸಂಸ್ಥಾನದಲ್ಲಿ ಕ್ಷಾಮ ಪ್ರದೇಶಗಳಿರುವ ಹಾಗೆಯೇ ಮಲೆನಾಡು ಪ್ರದೇಶವೂ ಇದೆಯೆಂಬುದು ಸರ್ಕಾರದವರಿಗೆ ತಿಳಿದ ಅಂಶವೇ ಆಗಿದೆ. ಮಲೆನಾಡು ಪ್ರದೇಶ ತನ್ನದೇ ಒಂದು ಪ್ರಾಕೃತಿಕ ವೈವಿಧ್ಯತೆಯನ್ನು ಹೊಂದಿದೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಅಲ್ಲ, ವೈಧವ್ಯತೆ ಹೊಂದಿದೆ ಯೆಂದಿರಬೇಕು (ನಗು !)

ಶ್ರೀ ಎಸ್. ಗೋಪಾಲಗೌಡ.—ಒಂದು ವಿಧದಲ್ಲಿ ಅದು ಸರಿಯೇ. ಅಲ್ಲಿಯ ಜನ ಜೀವನ ಒಂದು ವೈವಿಧ್ಯತೆಯಿಂದ ಕೂಡಿದೆ. ಮಲೆನಾಡು ಪ್ರದೇಶದಲ್ಲಿ ಕಾಡು ಹೆಚ್ಚು, ಮಳೆ ಜಾಸ್ತಿ, ಅಲ್ಲಿಯ ಜನರು ವಿಶೇಷವಾಗಿ ಮಲೇರಿಯಾ ರೋಗಗ್ರಸ್ತರಾಗಿರುತ್ತಾರೆ. ನೀರು ಇರತಕ್ಕ ಸ್ಥಳದಲ್ಲಿ ಮಲೇರಿಯಾ ಯಾವತ್ತೂ ಇರತಕ್ಕುದು ಸ್ವಾಭಾವಿಕ. ಅಲ್ಲಿ ಸಾರಿಗೆ ಸಂಪರ್ಕಗಳಿಲ್ಲ. ಮೈಸೂರು ಸಂಸ್ಥಾನದಲ್ಲಿ ಈ ಮಲೆನಾಡು ಪ್ರದೇಶ ದಕ್ಷಿಣದ ಕಡೆ ಮಲಬಾರುವರೆಗೂ, ಪಶ್ಚಿಮ ಘಟ್ಟದ ಉದ್ದಕ್ಕೂ ಇದೆ. ಮುಂಬೈ ಪ್ರಾಂತ್ಯದಲ್ಲಿಯೂ ಇದೆ. ಆದರೂ ಸಹ ಮಲೆನಾಡು ಬಗ್ಗೆ ಈ ಪಂಚವಾರ್ಷಿಕ ಯೋಜನೆಯಲ್ಲಿ ಯಾವ ಬಗೆಯ ಕಾರ್ಯಕ್ರಮವನ್ನೂ ಹಾಕಿಕೊಂಡಿಲ್ಲ. ಇದೊಂದು ವಿಷಾದಕರವಾದ ಸಂಗತಿ. ಬಹುಶಃ ಈ ಪಂಚವಾರ್ಷಿಕ ಯೋಜನೆಯನ್ನು ತಯಾರಿಸಿದ ಮಹನೀಯರು ಈ ಅಂಶವನ್ನು ಗಮನಿಸಿಲ್ಲವೆಂದು ತೋರುತದೆ. ಮಲೆನಾಡು ಪ್ರಾಂತ್ಯ ಕಾಫಿ, ಏಲಕ್ಕಿ, ವನಸಂಪತ್ತು ಮತ್ತು ಇತರ ಸಂಪತ್ತುಗಳಿಗೆ ನೆಲೆವೀಡಾಗಿದೆ. ಮಲೆನಾಡಿನ ಹಿತದೃಷ್ಟಿಯಿಂದ ಹಾಗೂ ಮೈಸೂರು ಸಂಸ್ಥಾನದ ಹಿತದೃಷ್ಟಿಯಿಂದ, ಇಡೀ ಜನತೆಯ ಹಿತದೃಷ್ಟಿಯಿಂದ ಮಲೆನಾಡು ಅಭಿವೃದ್ಧಿ ಅತಿ ಪ್ರಾಮುಖ್ಯವಾದು; ಇದರಿಂದ ದೇಶದ ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳಲು ಸಾಧಕ

ವಾಗುತ್ತದೆ ಎಂದು ಮಾತ್ರ ಹೇಳುತ್ತೇನೆ. ಹಿಂದೆ ಮಲೆನಾಡಿನ ಬಗ್ಗೆ ಶ್ರೀ ಎ. ವಿ. ರಾಮನಾಥನ್‌ರವರ ಯೋಜನೆಯೊಂದಿತ್ತು. ಅದೇ ರೀತಿ ಕೇಂದ್ರ ಸರ್ಕಾರದ ಮೂರು ಕೋಟಿ ರೂಪಾಯಿನ ಯೋಜನೆಯೊಂದು ಇತ್ತು ಎಂದು ಕೇಳಿದ್ದೆ. ಈಗ ಅದನ್ನೆಲ್ಲಾ ಕೈಬಿಟ್ಟಿದೆ. ಈಗಲಾದರೂ ಮಲೆನಾಡಿನ ಬಗ್ಗೆ ಮೈಸೂರು ಸರ್ಕಾರದವರು ತ್ವರಿತವಾಗಿ ಯೋಜನೆಯೊಂದನ್ನು ಕೈಗೊಂಡು ಮಲೆನಾಡು ಜನತೆಯ ಜೀವನವನ್ನು ಉತ್ತಮಪಡಿಸಿ, ತನ್ಮೂಲಕ ಸಂಸ್ಥಾನದ ಸಂಪತ್ತನ್ನು ಹೆಚ್ಚಿಸಿಕೊಳ್ಳಬೇಕೆಂದು ಕೋರುತ್ತೇನೆ.

ಇನ್ನು ಶ್ರೀವರ್ಮಾ ಶಿವಪ್ಪನವರು 'ನಮ್ಮ ಸರ್ಕಾರ ನುಡಿದಂತೆ ನಡೆಯುತ್ತಿದೆ, ಒಂದು ಮಾತನ್ನೂ ಕಳೆದಿಲ್ಲ' ಎಂದು ಹೇಳಿದರು. ಕೆಲವು ಸಂದರ್ಭಗಳಲ್ಲಿ ನಡೆದಿರಬಹುದು. ಆದರೆ ಅವರು ಹಾಗೆ ನಡೆಯದೆ ಇರತಕ್ಕ ಒಂದು ಘಟನೆಯನ್ನು ಈ ಸಭೆಯ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಇದನು ಗಮನಕ್ಕೆ ತರುವಾಗ ಸರ್ಕಾರ ಕೊಟ್ಟ ಮಾತನ್ನು ಪರಿಪಾಲಸಿಲ್ಲ ಎಂಬುದನ್ನು ಈ ಸಭೆಗೆ ತಿಳಿಸಬೇಕೆಂಬುದೇ ನನ್ನ ಉದ್ದೇಶ. ಹಿಂದಿನ ವರ್ಷ ರಾಜಪ್ರಮುಖರ ಭಾಷಣದಲ್ಲಿ ಈ ವರ್ಷದ ಆಖೈರು ಒಳಗೆ ಜಿಲ್ಲಾ ಬೋರ್ಡುಗಳ ಚುನಾವಣೆಯನ್ನು ನಡೆಸುವುದಾಗಿ ಹೇಳಿಸಿ, ಆ ರೀತಿ ಆಶ್ವಾಸನವನ್ನು ಬರೆದುಕೊಟ್ಟು, ಸರ್ಕಾರದವರು ಸಹ ಹಿಂದೆ ಈ ಸಭೆಯಲ್ಲಿ ಈರೀತಿ ಹೇಳಿಕೆ ಕೊಟ್ಟು ಆ ಮಾತನ್ನು ಈಡೇರಿಸಿಲ್ಲ. ಇಂತಹ ವಚನಭ್ರಷ್ಟತೆ ನಮ್ಮ ಸರ್ಕಾರಕ್ಕೆ ಇನ್ನೊಂದಿಲ್ಲವೆಂದು ಹೇಳದೇ ವಿಧಿ ಇಲ್ಲ.

ಶ್ರೀ ಕಡಿದಾಳ್ ಮಂಜಪ್ಪ (ರೆವಿನ್ಯೂ ಮತ್ತು ಮರಾಮತ್ ಶಾಖೆಗಳ ಮಂತ್ರಿಗಳು).—ಇನ್ನೊಂದು ಸಂಸ್ಕೃತ ಶಬ್ದಪ್ರಯೋಗ!

ಶ್ರೀ ಎಸ್. ಗೋಪಾಲಗೌಡ.—ತಾವು ಆ ರೀತಿ ಆಶ್ವಾಸನವನ್ನು ಕೊಡುವಾಗ ಪ್ರಜಾಯುಗದಲ್ಲಿ ಆ ರೀತಿ ಹೇಳಿರುತ್ತೀರಿ ಎಂಬುದನ್ನು ಮರೆಯಬಾರದು. ತಮಗೆ ಏನೇ ಅಡ್ಡಿ ಆತಂಕಗಳು ಬರಲಿ, ದೇಶದ ಜನತೆಯನ್ನು ಒಲಿಸಿಕೊಳ್ಳುವುದಕ್ಕೆ ಅವರ ಪ್ರೀತಿ ವಿಶ್ವಾಸಗಳನ್ನು ಗಳಿಸಿಕೊಳ್ಳುವುದಕ್ಕೆ, ದೇಶದ ಹಿತದೃಷ್ಟಿಯನ್ನು ಕಾಪಾಡಿಕೊಂಡು ಬರುವುದಕ್ಕೆ ತಾವು ಕೊಟ್ಟ ಆಶ್ವಾಸನವನ್ನು ಈಡೇರಿಸುವ ಕಾಲ ಬಂದಾಗ ಅದನ್ನು ಎಂದಿಗೂ ಮುರಿಯಬಾರದು. ಹಾಗೆ ಮಾಡಿದರೆ ತಮ್ಮ ಕರ್ತವ್ಯಕ್ಕೆ ಚ್ಯುತಿ ಬಂದಂತಾಗುತ್ತದೆ, ತಮ್ಮ ಕರ್ತವ್ಯದಲ್ಲಿ ಲೋಪವೆಸಗಿದಹಾಗಾಗುತ್ತದೆಯೆಂದು ಸ್ಪಷ್ಟವಾಗಿ ಹೇಳುತ್ತೇನೆ.

Mr. CHAIRMAN.—Will you please adjust yourself as to close your speech at 12-40?

ಶ್ರೀ ಎಸ್. ಗೋಪಾಲಗೌಡ.—ಬರುತ್ತಿದ್ದೇನೆ. ಇನ್ನೊಂದು ಸ್ವಲ್ಪ ಇದೆ. ಆದುದರಿಂದ ಸರ್ಕಾರ ಜನತೆಗೆ ಒಂದು ಆಶ್ವಾಸನವನ್ನು ಕೊಡುವಾಗ ತಾವು ತಿಳಿಸುವ ಪ್ರತಿ ಮಾತಿನ ಅರ್ಥವನ್ನೂ ಪೂರ್ಣವಾಗಿ ಗ್ರಹಿಸಿ ಜವಾಬ್ದಾರಿಯುತವಾಗಿ ಕೊಡಬೇಕೆಂದು ನಮ್ರತೆಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನೊಂದು ಅತಿ ಪ್ರಾಮುಖ್ಯವಾದ ವಿಚಾರ ನಾನು ಪ್ರಸ್ತಾಪಿಸಬೇಕಾದುದು ಎಂದರೆ, ಸರ್ಕಾರದಿಂದ ಹೊರಬೀಳುವ ಸುಗ್ರೀವಾಜ್ಞೆಗಳು. ಇದುವರೆಗೂ ಈ ಸರ್ಕಾರ ಒಂದುನೂರು ಸುಗ್ರೀವಾಜ್ಞೆಗಳನ್ನಾದರೂ ಹೊರಡಿಸಿದ್ದಾರೆ. ಪ್ರಜಾಪ್ರಭುತ್ವದ ಹಿತದೃಷ್ಟಿಯಿಂದ, ಈ ಸಭೆಯ ಮಾನ್ಯತೆ, ಗೌರವ ಮತ್ತು ಹಕ್ಕುಬಾಧ್ಯತೆಗಳ ಹಿತದೃಷ್ಟಿಯಿಂದ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಸರ್ಕಾರದ ಹಿತದೃಷ್ಟಿಯಿಂದ ಈ ರೀತಿ ಸುಗ್ರೀವಾಜ್ಞೆಗಳನ್ನು ಹೊರಡಿಸುವುದು ಉಚಿತವಾದುದಲ್ಲವೆಂದು ನಮ್ರತೆಯಿಂದ ತಿಳಿಸುತ್ತೇನೆ.

ಶ್ರೀ ಎ. ಭೀಮಪ್ಪನಾಯಕ್.—ಸುಗ್ರೀವಾಜ್ಞೆಗಳೆಂದರೇನು?

Sri S. GOPALA GOWDA.—Ordinances.

ಶ್ರೀ ಎ. ಭೀಮಪ್ಪನಾಯಕ್.—ಓಹೋ, Ordinances ಎಂಬುದಕ್ಕೆ ತಾವು ಮಾಡಿರುವ ತರ್ಜುಮೆಯೆ?

ಶ್ರೀ ಎಸ್. ಗೋಪಾಲಗೌಡ.—ಹೌದು. ಸಾಧ್ಯವಾದಮಟ್ಟಿಗೂ ಇವುಗಳನ್ನು ಹೊರಡಿಸುವುದಕ್ಕೆ ಕೈಹಾಕಬಾರದು, ಹಾಗೆ ಮಾಡುವುದು ಸರ್ಕಾರದ ಘನತೆಗೆ ತಕ್ಕುದಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ. ಏಕೆಂದರೆ, ಈ ಮಾನ್ಯ ಸಭೆಗೆ ಪ್ರತಿನಿಧಿಗಳನ್ನು ದೇಶದ ಒಂದು ಕೋಟಿ ಪ್ರಜಾಸಂಖ್ಯೆ ಚುನಾಯಿಸಿ ದೇಶದ ಕಾನೂನು ಕಾಯಿದೆಗಳನ್ನು ಆಗುಮಾಡುವುದಕ್ಕೆ ಕಳುಹಿಸಿದೆ. ಈ ಸಭೆಯು ಜೀವಂತವಾಗಿರುವಾಗ ...

ಶ್ರೀ ಕಡಿದಾಳ್ ಮಂಜಪ್ಪ.—ತಾವು Constitution ಓದಿದರೆ ಗೊತ್ತಾಗುತ್ತದೆ.

ಶ್ರೀ ಎಸ್. ಗೋಪಾಲಗೌಡ.—ಓದಿದ್ದೇನೆ. ಈ ಸಭೆಯನ್ನು ಕರೆಯದೆ ಹೋದವರ್ಷ ಒಂದೇ ಒಂದು ಸಭೆಯಲ್ಲಿಯೇ ಮುಕ್ತಾಯವಾಯಿತು. ಅಷ್ಟು ಹೊತ್ತಿಗೆ ರಾಜ್ಯಾಂಗ ತಿದ್ದುಪಡಿಯಾಗಿತ್ತು. ಹಾಗಿಲ್ಲದಿದ್ದರೆ ನಾವು ಹಕ್ಕುಬಾಧ್ಯತೆಯ ಸೂಚನೆಯನ್ನು ಈ ಸಭೆಯ ಗಮನಕ್ಕೆ ತರಲು ಅವಕಾಶವಿರುತ್ತಿತ್ತು. ಆದರೂ ಸಹ ಹೋದವರ್ಷ ಇನ್ನೊಂದು ಸಭೆಯನ್ನು ಕರೆದು ಬಳ್ಳಾರಿ ಸಮನ್ವಯವಾದ ನಂತರ ಅಲ್ಲಿಗೆ ಅನ್ವಯಿಸುವ ಕಾನೂನು ಕಾಯಿದೆಗಳನ್ನು ತಿದ್ದುಪಡಿ ಮಾಡಬಹುದಾಗಿತ್ತು. ಹಾಗೆ ಮಾಡದೆ/ಸಭೆಯನ್ನು ಮುಂದಕ್ಕೆ ಹಾಕಿದರು. ಇದೂ ಸಹ ಒಂದು ದೃಷ್ಟಿಯಿಂದ ಕರ್ತವ್ಯಲೋಪವೆಂದು ಭಾವಿಸುತ್ತೇನೆ.

ರಾಜ್ಯಾಂಗ ತಿದ್ದುಪಡಿ ಆಗಿರುವುದರಿಂದ ರಾಜ್ಯಾಂಗದ ದೃಷ್ಟಿಯಿಂದ ಕರ್ತವ್ಯ ಲೋಪವಾಗಿಲ್ಲದೇ ಇದ್ದರೂ ಕೂಡ ಕಾರ್ಯದೃಷ್ಟಿಯಿಂದ, ಕಾರ್ಯಗೌರವದ ದೃಷ್ಟಿಯಿಂದ, ಈ ಸಭೆಯನ್ನು ಕಳೆದವರ್ಷ ಕರೆಯಬೇಕಾಗಿತ್ತು, ಕರೆಯದೇ ಇದ್ದದ್ದು ಕರ್ತವ್ಯಲೋಪ ಎಂದು ಹೇಳಿ ನಾನು ಹೇಳುತ್ತೇನೆ. ಇದೇ ಸಂದರ್ಭದಲ್ಲಿ ಈ ರೀತಿ ಆರ್ಡಿನೆನ್ಸ್‌ಗಳನ್ನು ಹೊರಡಿಸುವುದಕ್ಕೆ ಅಗತ್ಯವಿಲ್ಲ, ಸಭೆ ಇದ್ದಾಗ ಅಂಥ ಆರ್ಡಿನೆನ್ಸ್‌ಗಳನ್ನು ಸಾಮಾನ್ಯ ವಿಷಯಗಳಿಗೆ ಹೊರಡಿಸಬಾರದು ಎಂದು ಹೇಳಿ ಮತ್ತೊಮ್ಮೆ ಈ ವಿಷಯವನ್ನು ಸ್ಪಷ್ಟಪಡಿಸುತ್ತೇನೆ.

ಇನ್ನು ಕೊನೆಯದಾಗಿ ಸರ್ಕಾರದವರು ದಿನನಿತ್ಯದ ಆಡಳಿತದಲ್ಲಿ ದಕ್ಷತೆಯಿಂದ ಮತ್ತು ಕಾಲ ವಿಳಂಬವಾಗದ ರೀತಿಯಲ್ಲಿ ರಾಜ್ಯಭಾರ ಮಾಡುವುದನ್ನು ಇನ್ನೂ ಅವರು ರೂಢಿಸಿಕೊಂಡು ಬಂದಿಲ್ಲ, ಅವರಿಂದ ಅದು ಸಾಧ್ಯವಾಗಿಲ್ಲ ಎಂದು ಹೇಳಿ ಬಹಳ ವಿಷಾದದಿಂದ ಹೇಳಬೇಕಾಗಿದೆ. ಬುಡದಿಂದ ತುದಿಯವರೆಗೂ ಕೂಡ ಹಿಂದೆ ಜನತೆಯ ಬಗ್ಗೆ ಯಾವ ಒಂದು ಅನಾದರಣೆ ಇತ್ತೋ, ಕಾಲವಿಳಂಬಮಾಡುವ ನೀತಿ ಇತ್ತೋ ಮತ್ತು ಜನತೆಯ ಅಭಿಪ್ರಾಯಕ್ಕೆ ಅರ್ಜಿಗಳಿಗೆ, ಅವರು ತಂದಂಥ ದೂರುಗಳಿಗೆ ನ್ಯಾಯವಾಗಿರಲಿ, ಇಲ್ಲದೇ ಇರಲಿ ಕಡೆಗಾಣಿಸುವ ಸಂಪ್ರದಾಯ ಬಳಿಯರ ಕಾಲದಿಂದ ನಡೆದುಕೊಂಡು ಬಂದಿತೋ ಅದೇ ಇನ್ನೂ ಇದೆ. ಅದ್ದ

(ಶ್ರೀ ಎಸ್. ಗೋಪಾಲಗೌಡ.)

ರಿಂದ ಇದನ್ನು ನಾನು ಬಹಳ ಸಂಕಟದಿಂದ ಹೇಳಬೇಕಾಗಿದೆ. ನಿಮ್ಮ ಮಾನ್ಯ ರೆವೆನ್ಯೂ ಮಂತ್ರಿಗಳು ಮೊದಲು ಹೇಳುತ್ತಾ ಇದ್ದರು, ನಾನು ಮಂತ್ರಿಯಾಗಿ ಬಂದರೆ P. W. D. ನಲ್ಲಿ ಯಾವ ಒಂದು ಕರಪ್ಷನ್ ಇಲ್ಲದಹಾಗೆ ನೋಡಿಕೊಳ್ಳುತ್ತೇನೆ, ಆರು ತಿಂಗಳಿನಲ್ಲಿ ಎಲ್ಲವನ್ನೂ ನಿಲ್ಲಿಸುತ್ತೇನೆ ಎಂದು. ಇದನ್ನು ನಾನು ಕೇಳಿದ್ದೇನೆ. ಆದರೆ ಇವೊತ್ತು ಕೂಡ ಅವೇ ಸಂಪ್ರದಾಯಗಳೇ ನಡೆದುಕೊಂಡು ಬರುತ್ತಾ ಇವೆ. ನಾನು ಹೇಳಬೇಕೆಂದರೆ ಕೆಲವು ಸಂದರ್ಭಗಳಲ್ಲಿ ಕರಪ್ಷನ್ ಇನ್ನೂ ಹೆಚ್ಚಾಗಿದೆ. ಇವೊತ್ತು ಕೆಲಸ ನಡೆಯಬೇಕಾದರೆ ಸರ್ಕಾರದಲ್ಲಿ ಯಾವಒಂದು ನೀತಿನಿಯಮವೂ ಕಂಡು ಬರುತ್ತಿಲ್ಲ. ಹಿಂದೆ ಬಿಳಿಯರು ಇದ್ದಾಗ ನಮ್ಮನ್ನು ಗಲ್ಲಿಗೆ ಹಾಕಿ ಯಾರು, ಡಿಸ್‌ಮಿಸ್ ಮಾಡಿಯಾರು ಎಂಬ ಭಯ ಇತ್ತು. ಆದರೆ ಇವೊತ್ತು ಅದೂಕೂಡ ಅನೇಕ ಸಂದರ್ಭಗಳಲ್ಲಿ ಇಲ್ಲ. ಆದ್ದರಿಂದ ಈ ಅಧಿಕಾರದ ಯಂತ್ರ ಏನಿದೆ, ತಾವು ಯಾವ ಯಂತ್ರದ ಮುಖಾಂತರ ಜನತೆಯ ಅಭಿವೃದ್ಧಿಯನ್ನು, ವಿದಾಭ್ಯಾಸದ ಯೋಜನೆಗಳನ್ನು ಕಾರ್ಯಗತ ಮಾಡಬೇಕೆಂದು ಇಷ್ಟಪಟ್ಟವರಾಗಿದ್ದೀರಿ ಆ ನಿಮ್ಮ ಇಷ್ಟ, ಆ ನಿಮ್ಮ ಕಾರ್ಯ ಯೋಜನೆಗಳು ಕಾರ್ಯಗತವಾಗಬೇಕಾದರೆ ಯಾವ ಯಂತ್ರದ ಮುಖಾಂತರ ಯೋಜನೆಯನ್ನು ಕಾರ್ಯಗತ ಮಾಡಬೇಕೆಂದು ಇದ್ದೀರೋ. ಆ ವ್ಯವಸ್ಥೆ ಶುದ್ಧವಾಗಿರಬೇಕು. ಆ ಯಂತ್ರ responsive ಆಗಿರಬೇಕು. ನೀವು ಹೇಳಿದರೆ ನಿಮ್ಮ ಮಾತನ್ನು ಕೇಳುವಹಾಗಿರಬೇಕು. ಜನತೆ ಹೇಳುವುದು ನ್ಯಾಯವಾಗಿದ್ದರೆ, ಜನತೆ ಹೇಳುವ ಮಾತನ್ನು ಕೇಳುವಂತೆ ಇರಬೇಕು. ಅದು irresponsive ಆಗಿರಬಾರದು. ಅದು ಜನತೆಯ ಒಂದು ಬಯಕೆಯನ್ನು ತಿಳಿಯತಕ್ಕದ್ದಾಗಿರಬೇಕು ಎಂದು ವಿನಯದಿಂದ ಹೇಳುತ್ತೇನೆ. ಆದ್ದರಿಂದ ಈ ಯಂತ್ರವನ್ನು ಶುದ್ಧಿ ಮಾಡಿ ಕಾಲಕ್ಕೆ ತಕ್ಕಹಾಗೆ ಬದಲಾವಣೆ ಮಾಡಿಕೊಂಡು ಕೆಲಸ ಮಾಡುವುದಕ್ಕೆ ಮುಂದೆ ಬರುವಂತೆ ಮಾಡಿದ ಹೊರತು ನಮ್ಮ ಜನಗಳು, ನೀವು ಮತ್ತು ನಿಮ್ಮ ದೇಶ ಇವು ಮೂರುಕೂಡ ವಿನಾಶದ ಕಡೆಗೆ ಹೋಗುತ್ತವೆ. ಆದ್ದರಿಂದ ಆ ದೊಡ್ಡ ಗಂಡಾಂತರವನ್ನು ನಿಮಗೆ ತಂದುಕೊಳ್ಳುವುದೂ ಅಲ್ಲದೆ ದೇಶದ ದೃಷ್ಟಿಯಿಂದ, ದೇಶದಲ್ಲಿ ನೀತಿ ಕೆಟ್ಟು ಹೋಗುತ್ತದೆ, ದೇಶದಲ್ಲಿ ಅವರ ಜೀವನ ಕ್ರಮ ಕೆಟ್ಟುಹೋಗಿದೆ. ಅವರನ್ನು ಗಂಡಾಂತರಕ್ಕೆ ಈಡುಮಾಡುತ್ತೀರಿ ಎಂದು ಹೇಳಿ ಈ ಭಾಷಣದ ಮೇಲೆ ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

Mr. CHAIRMAN.—Sri Gopala Gowda in the course of his speech observed that the Government should have arranged for this debate soon after His Highness's Address. I would like to invite reference of the Hon'ble Member to Rule 14 5) according to which the Debate on the Address can take place on such day or days as the Speaker in consultation with the Leader of the House shall fix. It is thus clear that it is for the Speaker to fix the days for debate and as such the Government could not be held responsible for the arrangement of business.

ಶ್ರೀ ಆರ್. ಮುನಿಸ್ವಾಮಯ್ಯ (ಬೆಂಗಳೂರ ಉತ್ತರ—ಅನುಸೂಚಿತ ಜಾತಿಗಳು).—ಶ್ರೀಮನ್ ಮಹಾರಾಜರು ದಯಪಾಲಿಸಿದ ಭಾಷಣವನ್ನು ಸ್ವಾಗತಿಸುತ್ತೇನೆ. ಶ್ರೀಮನ್ ಮಹಾರಾಜರು ಬಹಳ ವಿವೇಚನಾ ಪೂರಿತವಾದ ಭಾಷಣವನ್ನು ದಯಪಾಲಿಸಿದ್ದಾರೆ. ಇದು ಸಂಕ್ಷೇಪವಾಗಿದ್ದರೂ ಸಹ ನಮ್ಮ ರಾಷ್ಟ್ರದ ಏಳಿಗೆಗಳನ್ನು ಕುರಿತು ವಿಸ್ತಾರವಾಗಿ ಅಸೆಂಬ್ಲಿ ಮೆಂಬರುಗಳಾಗಿರತಕ್ಕ ನಾವು ಮತ್ತು ನಮ್ಮ ಆಡಳಿತ ವರ್ಗದವರೂ ಸಹ ಯೋಚನೆ ಮಾಡಿ ದೇಶದ ಸರ್ವತೋಮುಖವಾದ ಅಭಿವೃದ್ಧಿಗೆ ಹೆಚ್ಚಾಗಿ ಶ್ರಮಿಸಿ ಕೆಲಸ ಮಾಡುವುದಕ್ಕಾಗಿ ಅನುಸರಿಸಬಹುದಾದ ಮಾರ್ಗಗಳೇನೆಂಬುದನ್ನು ತೋರಿಸಿಕೊಟ್ಟಿದ್ದಾರೆ. ಮೊದಲನೆಯದಾಗಿ ಬಳ್ಳಾರಿ ವಿಷಯವನ್ನು ಪ್ರಸ್ತಾಪಿಸಿ ಅವರ ಸಂತೋಷವನ್ನು ವ್ಯಕ್ತಪಡಿಸಿದ್ದಾರೆ. ನಾನೂ ಸಹ ಬಳ್ಳಾರಿಯವರು ಮೈಸೂರಿನೊಡನೆ ಸೇರಿ ಮಹಾ ಮೈಸೂರು ಆಗುವುದಕ್ಕೆ, ಮೈಸೂರು ವಿಸ್ತಾರವಾಗುವುದಕ್ಕೆ ಒಂದು ಅವಕಾಶವನ್ನು ಒದಗಿಸಿದ್ದಕ್ಕಾಗಿ ಸಂತೋಷಪಡುತ್ತೇನೆ. ಈಗ ನಮ್ಮಲ್ಲಿಗೆ ಬಂದು ಇಲ್ಲಿ ಕುಳಿತಿರುವ ಮಾನ್ಯ ಮಂತ್ರಿ ಶ್ರೀ ನಾಗನಗೌಡರೂ ಸೇರಿ ಐದು ಮಂದಿ ಸದಸ್ಯರನ್ನೂ ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಬಳ್ಳಾರಿ ಕೊರತೆಯ ಪ್ರದೇಶ ಎಂಬುದು ಮೊದಲಿನಿಂದಲೂ ಪ್ರಸಿದ್ಧವಾಗಿರತಕ್ಕ ವಿಷಯ. ಆದರೂ ಪ್ರಕೃತಿ ನಿಯಮವನ್ನು ನೋಡಿದರೆ ಅಲ್ಲಿ ಅರಣ್ಯ ಸಂಪತ್ತು ವಿಶೇಷವಾಗಿದೆ ಮತ್ತು ಖನಿಜ ಸಂಪತ್ತು ವಿಶೇಷವಾಗಿದೆ ಎಂದು ಕೇಳಿದ್ದೇನೆ. ಅವುಗಳನ್ನು ರೂಢಿಸಿಕೊಳ್ಳುವುದಕ್ಕೆ, ಹೊಸದಾಗಿ ಸೇರಿರತಕ್ಕ, ಆ ಪ್ರದೇಶದವರನ್ನು ಬರಮಾಡಿಕೊಂಡಿರತಕ್ಕ ನಾವು ಹೆಚ್ಚು ಹೆಚ್ಚಾಗಿ ಶ್ರದ್ಧೆ ವಹಿಸಿ ಯೋಜನೆಗಳನ್ನು ಹಾಕಿಕೊಂಡು, ನಮ್ಮ ಮೈಸೂರು ದೇಶವನ್ನು ಅಭಿವೃದ್ಧಿಗೊಳಿಸಿ ಭಾರತ ದೇಶದಲ್ಲೇ ಪ್ರಗತಿಯಿಂದ ಮೆರೆಯುವಂತೆ ಮಾಡಲು ಶ್ರಮಿಸಬೇಕೆಂದು ಈ ಸಮಯದಲ್ಲಿ ನಾನು ಹೇಳ ಬಯಸುತ್ತೇನೆ. ಈ ಗುರಿಯನ್ನು ಸಾಧಿಸುವುದಕ್ಕೆ ಖಂಡಿತವಾಗಿಯೂ ನಮ್ಮ ಸಂಸ್ಥಾನದಲ್ಲಿ ಅವಕಾಶವಿದೆ. ಅನಂತರ ನೀರಾವರಿ ಯೋಜನೆಗಳನ್ನು ನಾವು ಯೋಚನೆ ಮಾಡುವುದಾದರೆ, ನಮ್ಮ ಸ್ನೇಹಿತರಾದ ಶ್ರೀಮಾನ್ ಶಿವಪ್ಪನವರು ಹೇಳಿದ ಹಾಗೆ ಸಂಸ್ಕೃತಿ ಪ್ರಸಾರದ ಒಂದು ಯೋಜನೆಯಿಂದ ಜನಗಳಲ್ಲಿ ದೇವರ ಭಕ್ತಿ ಹುಟ್ಟಿ, ಮಳೆ ಬೆಳೆಗಳು ಚೆನ್ನಾಗಿ ಆಗಿವೆ. ನಾವೂ ಸಹ ಸಂತೋಷಪಡುತ್ತಾ ಇದ್ದೇವೆ. ಮಳೆ ಬೆಳೆ ಆಗದೆ ಜನಗಳು ಸಂಕಟಪಡುತ್ತಾ ಇದ್ದಿದರೆ ನಾವೂ ಕೂಡ ಸಂಕಟಪಡುತ್ತಾ ಇರಬೇಕಾಗಿತ್ತು. ಜನಗಳು ಸುಖವಾಗಿ ಇದ್ದಾರೆ ರೈತರು ಸುಖವಾಗಿ ಇದ್ದಾರೆ. ಅವರ ಆನಂದದಲ್ಲಿ ನಾವೂ ಸೇರಿ ದೇಶಕ್ಕೆ ದೇಶವೇ ಸುಖವಾಗಿ ಇದ್ದಹಾಗೆ ಕಾಣುತ್ತಾ ಇದೆ.

ಮೈಸೂರು ಸರ್ಕಾರದವರು ಭಾರತ ಸರ್ಕಾರದ ಯೋಜನೆಗಳ ಜೊತೆಗೆ ಅನೇಕ ಸಣ್ಣ ಸಣ್ಣ ಕೆರೆಗಳನ್ನು ಸಹ ಹೊಸದಾಗಿ ಕಟ್ಟಿಸುತ್ತಾ ಇರುವುದನ್ನು ಅಸೆಂಬ್ಲಿ ಸದಸ್ಯರು ತಿಳಿಯದೇ ಇರತಕ್ಕ ವಿಷಯವಲ್ಲ. ಹೊಸಕೋಟೆ ತಾಲ್ಲೂಕಿನಲ್ಲಿ ಒಂದು ಕೆರೆ, ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಒಂದು ಕೆರೆ. ಮಂಡ್ಯ ಡಿಸ್ಟ್ರಿಕ್ಟ್‌ನಲ್ಲಿ ಒಂದು, ಶಿವಮೊಗ್ಗಾ ಡಿಸ್ಟ್ರಿಕ್ಟ್‌ನಲ್ಲಿ ಒಂದು ಈ ರೀತಿ ಹೊಸ ಹೊಸ ಕೆರೆಗಳನ್ನು ನಿರ್ಮಿಸುತ್ತಾ ಇದ್ದಾರೆ. ಚಿತ್ರದುರ್ಗ ಡಿಸ್ಟ್ರಿಕ್ಟ್‌ನಲ್ಲಿಯೂ ಅನೇಕ ದೊಡ್ಡ ದೊಡ್ಡ ಕೆರೆಗಳ ಕೆಲಸ ನಡೆಯುತ್ತಾ ಇದೆ.

ಹೀಗೆ ಮೈಸೂರು ಸರ್ಕಾರದವರು ವಿಶೇಷ ಹಣವನ್ನು ವೆಚ್ಚಮಾಡಿ ನೀರಾವರಿ ಕೆಲಸಗಳನ್ನು ಬಹಳ ಯಶಸ್ವಿಯಾಗಿ ಪ್ರಾರಂಭಿಸಿದ್ದಕ್ಕೆ ವಿರೋಧ ಪಂಗಡದವರು ಕೂಡ ಸಂತೋಷಪಡುತ್ತಿದ್ದಾರೆ.

ಆಹಾರ ಪರಿಸ್ಥಿತಿ ಮಳೆಗಾಲದ ಪರಿಣಾಮವಾಗಿ ಬಹಳ ಉತ್ತಮವಾಗಿದೆ, ಆದಾಗ್ಯೂ ಸರ್ಕಾರದವರು ಮುಂಜಾಗರೂಕತೆಯನ್ನು ತೆಗೆದುಕೊಂಡು ಅಲ್ಲಲ್ಲಿ ಡಿಪೋಗಳನ್ನಿಟ್ಟಿರುವುದು ಬಹಳ ಸಹಾಯಕವಾಗಿದೆ. ಇದರಿಂದ ರೈತರು ಬೆಳೆಗಳ ವಿರುಶೇರುಗಳಿಗೆ ಸಿಕ್ಕದೆ ಸಾಧ್ಯವಾದಷ್ಟು ಮಟ್ಟಿಗೆ ನಿಯಮಿತವಾದ ಬೆಲೆಯನ್ನು ಪಡೆಯಲು ಬಹಳ ಅನುಕೂಲವಾಗಿದೆ. ಅದರೆ ಈಗ ಬರೀ ಬತ್ತಕ್ಕೆ ಮಾತ್ರ ಬೆಲೆ ನಿಗದಿ ಮಾಡಿದ್ದಾರೆ. ಅದೇ ರೀತಿಯಲ್ಲಿ ಉಳಿದ ದವಸ ಧಾನ್ಯಗಳಿಗೂ ಕೂಡ ಒಂದು ರೀತಿ ನಿಯಮಿತವಾದ ಬೆಲೆಯನ್ನು ಜಾಗ್ರತೆ ನಿಗದಿ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಪಂಚ ವಾರ್ಷಿಕ ಯೋಜನೆಗಳಲ್ಲಿ ನಮ್ಮ ಪ್ರಜಾ ಸಂಖ್ಯೆಯಲ್ಲಿ ಸುಮಾರು ಕಾಲು ಭಾಗದಷ್ಟು ಜನರಿಗೆ ಉದ್ಯೋಗ ಸಹಾಯ ಲಭಿಸುವಂತೆ ಏರ್ಪಾಡಾಗಿದೆಯೆಂದು ಮಹಾರಾಜರು ಅಪ್ಪಣೆ ಕೊಡಿಸಿದ್ದಾರೆ, ಇದು ನಿಜ. ಏಕೆಂದರೆ ಇದು ಕಾರ್ಯಗತವಾಗುವ ಕಾಲದಲ್ಲಿ ಹೆಚ್ಚು ಜನರಿಗೆ ಕೆಲಸ ಒದಗಿಸುವುದರಿಂದ ನಿರುದ್ಯೋಗ ಸಮಸ್ಯೆ ಬಹಳ ಮಟ್ಟಿಗೆ ಪರಿಹಾರವಾಗುವುದರಲ್ಲಿ ಸಂದೇಹವಿಲ್ಲ. ಇದಕ್ಕೆ ಈಗೆ ಬೇಕಾದ 9 ಕೋಟಿ ರೂಪಾಯಿಗಳನ್ನು ಮತ್ತು 8 ಕೋಟಿ ರೂಪಾಯಿಗಳನ್ನು ಸಾಲದ ರೂಪದಲ್ಲಿ ಮತ್ತು ತೆರಿಗೆ ರೂಪದಲ್ಲಿ ನಾವು ಒದಗಿಸಿಕೊಳ್ಳಬೇಕೆಂದು ಪ್ರಸ್ತಾಪಿಸಿದ್ದಾರೆ. ಕೆಲವು ಮಹನೀಯರು, ಹಿಂದೆ ನಮ್ಮ ಸರ್ಕಾರ ಸಾಲವೆತ್ತಿದಾಗ ಹೊರಗಡೆಯವರು ಸಾಲ ಕೊಡಬೇಕಾಗಿ ಬಂತು ಎಂದು ಹೇಳಿದರು. ಸರ್ಕಾರದಲ್ಲಿ ಹಣವಿಲ್ಲದೇ ಹೋದುದರಿಂದ ಸಾಲ ಎತ್ತಬೇಕಾಗಿ ಬಂತು, ನಿಜ. ಸರ್ಕಾರದವರೂ ನಾವೇ, ಪ್ರಜೆಗಳೂ ನಾವೇ ಆಗಿರುವಾಗ ಸರ್ಕಾರ ಬೇರೆ, ನಾವು ಬೇರೆ ಎಂದು ಹೇಳಿ ಸರ್ಕಾರಕ್ಕೆ ಸಾಲ ಕೊಡುವುದಿಲ್ಲವೆನ್ನುವುದು ಸೂಕ್ತವಾಗಿ ಕಾಣುವುದಿಲ್ಲ. ಪ್ರಜಾ ಸರ್ಕಾರ ನಮ್ಮದೇ ಸರ್ಕಾರವಾಗಿರುವಾಗ ಅದು ಹಾಕಿರುವ ಪಂಚ ವಾರ್ಷಿಕ ಯೋಜನೆ ಪೂರೈಕೆಗೆ ಯಾವಾಗ ನಮ್ಮ ದೇಶ ಹಣ ಒದಗಿಸಲಾರದೋ, ಯಾವಾಗ ನಮ್ಮಲ್ಲಿ ಸಾಕಷ್ಟು ಸಾಲ ಕೊಡುವ ಐಶ್ವರ್ಯವಂತರಿಲ್ಲವೋ ಆಗ ಹೊರಗಡೆಯಿಂದ ಸಾಲ ತೆಗೆದುಕೊಳ್ಳುವುದು ಅನುಚಿತವಲ್ಲ. ನಮ್ಮ ಸರ್ಕಾರ ಈ ಕಾರಣದಿಂದ ಹೊರಗಡೆಯಿಂದಲೂ ಸಾಲವನ್ನು ತೆಗೆದುಕೊಂಡಿದೆ. ಇದನ್ನು ನೋಡಿ ಕೆಲವು ಸದಸ್ಯರು ಸರ್ಕಾರದಲ್ಲಿ ನಮ್ಮ ದೇಶದ ಜನರಿಗೆ ನಂಬಿಕೆಯಿಲ್ಲ ಎಂದು ಒಂದು ರೀತಿಯಲ್ಲಿ ಅಪವಾದ ಹೊರಿಸುವುದರಲ್ಲಿ ಅಷ್ಟು ಔಚಿತ್ಯವೇನೂ ಕಾಣುವುದಿಲ್ಲ.

ಇನ್ನು ಹೊಸ ತೆರಿಗೆಗಳನ್ನು ಹಾಕಬೇಕೆಂದು ಸೂಚಿಸಿದ್ದಾರೆ. ಬಡವರಿಗೆ ಮಾತ್ರ ಇದು ಬೀಳುತ್ತದೆ ಎಂದು ಕೆಲವರು ಹೇಳಿದರು. ಆದರೆ ಅದು ಹಾಗಿಲ್ಲ. ನಾವು ನೋಡುವ ಹಾಗೆ ಹೆಚ್ಚು ಹೆಚ್ಚಾಗಿ ಖರ್ಚುಮಾಡುವವರು, ಹೆಚ್ಚು ಹೆಚ್ಚಾಗಿ ಗಳಿಸುವವರು ಸಾಹುಕಾರರೇ ಹೊರತು ಬಡವರಲ್ಲ. ಈಗ ಉದಾಹರಣೆ ಕೊಡುವುದಾದರೆ ಸಿಗರೇಟು ಸೇದುವುದನ್ನು ನೋಡಿ, ಸಾಹುಕಾರರೇ ಹೆಚ್ಚು ಹೆಚ್ಚಾಗಿ ಸೇದುತ್ತಾರೆ. ಆದ್ದರಿಂದ ಅವರ ಮೇಲೆ ತೆರಿಗೆ ಬೀಳುತ್ತದೆಯೇ ಹೊರತು ಬಡವರ ಮೇಲೆ ಬೀಳುವುದಿಲ್ಲ. ಈ ರೀತಿ ತೆರಿಗೆ ವಿಧಿಸುವುದರಿಂದ ಸಾಹುಕಾರರಲ್ಲಿರುವ ಹಣವನ್ನು ಸರ್ಕಾರದ ಮೂಲಕ ಹಲವು ರೀತಿಗಳಲ್ಲಿ ಬಡವರ ಸೌಕರ್ಯಕ್ಕೆ ಒದಗಿಸಲಾಗುತ್ತದೆ. ಬಡವರನ್ನು ತೆರಿಗೆ ಹಾಕಿ ಶೋಷಣೆ ಮಾಡುವ ಅವಕಾಶವೇ ಇಲ್ಲ. ಮಲ್ಟಿ ಪಾಯಿಂಟ್ ತೆರಿಗೆ ಹಾಕಿದರೂ ಕೂಡ ಅದು ಸಾಹುಕಾರರ ಮೇಲೆ ಬೀಳುತ್ತದೆ. ಈಗ ಕಾಲವಿದ್ದರೆ ವಿವರಣೆಗಳಿಂದ ತೋರಿಸಬಹುದಾಗಿತ್ತು. ಆದ್ದರಿಂದ ನಾವೆಲ್ಲರೂ ಸರ್ಕಾರದೊಡನೆ ಸಂಪೂರ್ಣವಾಗಿ ಸಹಕರಿಸಿ ನಮ್ಮ ದೇಶದ ಏಳಿಗೆಯನ್ನು ಸಾಧಿಸಬೇಕು. ವಿರೋಧ ಪಕ್ಷದವರ, ಸರ್ಕಾರ ನಡೆಸುವವರು ಬೇರೆ ಪಕ್ಷದವರು, ತಮ್ಮ ಪಕ್ಷದವರಲ್ಲ, ಎಂಬ ಭೇದವೆಣಿಸದೆ ವಿರೋಧ ಪಕ್ಷದ ಎಲ್ಲ ಸದಸ್ಯರೂ ಸಹಕಾರ ನೀಡಿ, ಮಾಡಬೇಕಾದ ಕೆಲಸಗಳನ್ನು ಯಶಸ್ವಿಯಾಗಿ ನಡೆಸಲು ಅವಕಾಶ ಮಾಡಿಕೊಡಬೇಕು ಎಂದು ಪ್ರಾರ್ಥಿಸಿ, ಶ್ರೀಮನ್ ಮಹಾರಾಜರವರು ವಿವೇಚನಾಪೂರಿತವಾದ ಭಾಷಣವನ್ನು ದಯಪಾಲಿಸಿರುವುದಕ್ಕಾಗಿ ಅವರನ್ನು ವಂದಿಸುತ್ತೇನೆ.

Sri MULKA GOVINDA REDDY.—Sir, we would like to know the programme for the remaining part of the Session.

Mr. CHAIRMAN.—So far as the programme for Monday is concerned, the debate will continue. Beyond that, the House will know what will be the future programme on Monday.

The House will now rise for the day and meet on Monday at 12 NOON.

The House adjourned at Fifty-five Minutes past Twelve of the Clock to meet again on Monday, the 18th January 1954 at Twelve of the Clock.